ಅಂತರಾಳದಿಂದ.. EDITORIAL

# ಬೆಲೆಯೇರಿಕೆ: ಜನಸಾಮಾನ್ಯರ ಪರ ಸರಕಾರದ ಸ್ಪಂದನೆ ಅಗತ್ಯ



## ಅಕ್ರಮ ದಾಸ್ತಾನು, ಅಕ್ರಮ ವ್ಯವಹಾರಕ್ಕೆ ಮುಂದಾಗಿರುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ

ದೇಶದಲ್ಲಿ ಇತ್ತೀಚೆಗಿನ ದಿನಗಳಲ್ಲಿ ಸಕ್ಕರೆ, ಬೆಲ್ಲ ಮತ್ತು ಅಕ್ಕಿಯಂತಹ ಅತ್ಯಾವಶ್ಯಕ ಆಹಾರ ಪದಾರ್ಥಗಳ ಬೆಲೆ ದಿಢೀರ್ ಗಗನಕ್ಕೇರಿರುವುದು ಬಡ ಹಾಗೂ ಮಧ್ಯಮ ವರ್ಗದವರ ಬದುಕನ್ನು ದುರ್ಭರಗೊಳಿಸಿದೆ. ಕೆಲವು ತಿಂಗಳ ಹಿಂದೆ ಕ್ವಿಂಟಾಲ್ ಸರಾಸರಿ 3,800 ರೂ.ಗಳಷ್ಟಿದ್ದ ಸಕ್ಕರೆ ದರವು ಹಠಾತ್ತನೆ 6,800ರಿಂದ 7,000 ರೂ.ಗಳಿಗೆ ಏರಿಕೆಯಾಗಿರುವುದು ಕಳವಳಕಾರಿ. ಇದರೊಂದಿಗೆ ಅಕ್ಕಿಯ ಬೆಲೆಯೂ ಹೆಚ್ಚುತ್ತಿರುವುದು ಜನಸಾಮಾನ್ಯರ ಅಡುಗೆಮನೆಯ ಬಜೆಟ್ ಅನ್ನು ಸಂಪೂರ್ಣವಾಗಿ ಅಸ್ತವ್ಯಸ್ತಗೊಳಿಸಿದೆ. ಹಬ್ಬದ ಋತು ಸಮೀಪಿಸುತ್ತಿರುವಂತೆ ಸಕ್ಕರೆಯಂತಹ ಅಗತ್ಯ ವಸ್ತುಗಳ ಬೆಲೆ ಹಠಾತ್ ದುಪ್ಪಟ್ಟಾಗುವುದಕ್ಕೆ ಸಹಜವಾದ ಅಧಿಕ ಬೇಡಿಕೆ- ಕಡಿಮೆ ಪೂರೈಕೆಯ ಕಾರಣ ಇರಲಾರದು ಎಂದರೆ ತಪ್ಪಾಗದು. ಎಥೆನಾಲ್ ಬಳಕೆ ಹೆಚ್ಚಳದಂತಹ ನೆಪಗಳನ್ನು ಮುಂದಿರಿಸಿಕೊಂಡು ಭಾರೀ ಪ್ರಮಾಣದ ವ್ಯಾಪಾರಿಗಳು, ದಾಸ್ತಾನುಗಾರರು ಅಕ್ರಮ ದಾಸ್ತಾನು, ಅಕ್ರಮ ವ್ಯವಹಾರಕ್ಕೆ ಮುಂದಾಗಿರುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ.

ಸಕ್ಕರೆ, ಅಕ್ಕಿ ಮಾತ್ರವಲ್ಲದೆ ತರಕಾರಿಗಳ ಸಹಿತ ಇತರ ಅಗತ್ಯ ವಸ್ತುಗಳ ಬೆಲೆಯೇರಿಕೆಯೂ ಕಂಡುಬಂದಿದೆ. ಸಕ್ಕರೆ, ಅಕ್ಕಿಯಂತಹ ವಸ್ತುಗಳ ದರ ಹೆಚ್ಚಳವಾದರೆ ಅದು ಅಲ್ಲಿಗೆ ಸೀಮಿತವಾಗದೆ ಹೊಟೇಲ್ ಖಾದ್ಯಗಳು, ಸಿಹಿ ತಿನಿಸುಗಳು, ಆಹಾರ ವಸ್ತುಗಳ ದರ ಹೆಚ್ಚಳದಲ್ಲಿ ಪರ್ಯಾವಸಾನಗೊಳ್ಳುತ್ತದೆ.

ಮಳೆಯ ಕೊರತೆ ಮತ್ತು ರೋಗಗಳಿಂದ ಕಬ್ಬಿನ ಇಳುವರಿ ಗಣನೀಯವಾಗಿ ಕುಸಿದಿದ್ದು, ದೇಶದ ಸಕ್ಕರೆ ಉತ್ಪಾದನೆ ಪ್ರಮಾಣವು 343 ಲಕ್ಷ ಮೆಟ್ರಿಕ್ ಟನ್‌ಗಳಿಂದ 306 ಲಕ್ಷ ಮೆಟ್ರಿಕ್ ಟನ್‌ಗಳಿಗೆ ಇಳಿಕೆಯಾಗಿದೆ. ಮುಖ್ಯವಾಗಿ ಕಬ್ಬು ಉತ್ಪಾದನೆಯಲ್ಲಿ ಅಗ್ರಸ್ಥಾನದಲ್ಲಿರುವ ಉತ್ತರ ಪ್ರದೇಶ, ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಮಳೆ ಕಡಿಮೆಯಾಗಿರುವುದು ಇಳುವರಿ ಇಳಿಕೆಗೆ ಕಾರಣವಾಗಿದೆ.

> ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರು ಲಭ್ಯವಿರುವ ಸಕ್ಕರೆ ದಾಸ್ತಾನನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿ, ಹಳೆಯ ದರದಲ್ಲಿ ದೊರೆಯುವಂತೆ ಮಾಡುವುದಾಗಿ ಭರವಸೆ ನೀಡಿರುವುದು ಸಮಾಧಾನಕರ ವಿಷಯ. ಆದರೆ ಕೇವಲ ಘೋಷಣೆಗಳಿಗೆ ಸೀಮಿತವಾಗದೆ, ಕಾಳಸಂತೆಕೋರರು ಮತ್ತು ಅಕ್ರಮ ದಾಸ್ತಾನುದಾರರ ವಿರುದ್ಧ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಜಂಟಿಯಾಗಿ ಕಠಿನ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು. ಈಗಾಗಲೇ ಸರಕಾರವು ದಾಸ್ತಾನಿನ ಮೇಲೆ ಮಿತಿ ವಿಧಿಸಿದೆ. ಈ ಋತುವಿನಲ್ಲಿ ದೇಶದಿಂದ 8 ಲಕ್ಷ ಮೆಟ್ರಿಕ್ ಟನ್ ಸಕ್ಕರೆಯನ್ನು ರಫ್ತು ಮಾಡಲಾಗಿತ್ತು.

ಇಂಧನ ಮಿಶ್ರಣಕ್ಕಾಗಿ ಎಥೆನಾಲ್ ಉತ್ಪಾದನೆಗೆ ಒತ್ತು ನೀಡಿರು-ವುದು ಮತ್ತು ಇದರ ಲಾಭ ಪಡೆದ ಸಕ್ಕರೆ ವ್ಯಾಪಾರಿಗಳ ಮಾಫಿಯಾ ಮಾರುಕಟ್ಟೆಯಲ್ಲಿ ಕೃತಕ ಅಭಾವ ಸೃಷ್ಟಿಸಿರುವುದು ದರ ಏರಿಕೆಗೆ ಕಾರಣವಾಗಿದೆ. ಸಕ್ಕರೆ ಉತ್ಪಾದನೆ ಕಡಿಮೆಯಾಗಿದೆ ಎಂಬುದರ ಸುಳಿವು ಪಡೆದ ವ್ಯಾಪಾರಿಗಳು ಹೆಚ್ಚಿನ ಪ್ರಮಾಣದಲ್ಲಿ ಸಕ್ಕರೆ ಸಂಗ್ರಹಿಸಿ ಹಬ್ಬದ ಸಂದರ್ಭ ಕೃತಕ ಅಭಾವ ಸೃಷ್ಟಿಸಿದ್ದಾರೆ. ಆದರೆ ಫಸಲು ಇಳಿಕೆಯನ್ನು ಗಮನಿಸಿದ ಬಳಿಕ ಸರಕಾರವು ದೇಶದಿಂದ ರಫ್ತು ಮಾಡುವುದನ್ನು ಕೂಡ ನಿಷೇಧಿಸಿದೆ. ವಿದೇಶದಿಂದ ಸುಂಕರಹಿತವಾಗಿ ಸಕ್ಕರೆ ಆಮದಿಗೆ ಅವಕಾಶವನ್ನೂ ನೀಡಿದೆ. ಮುಖ್ಯವಾಗಿ ದೊಡ್ಡ ದೊಡ್ಡ ವ್ಯಾಪಾರಿಗಳು ಸಾಕಷ್ಟು ಪ್ರಮಾಣದಲ್ಲಿ ಸಕ್ಕರೆಯನ್ನು ದಾಸ್ತಾನು ಇರಿಸಿ ಕೃತಕವಾಗಿ ಬೆಲೆ ಏರಿಸುತ್ತಿದ್ದಾರೆ ಎಂಬ ಆರೋಪ ಇರುವುದರಿಂದ ಇದನ್ನು ಪತ್ತೆ ಹಚ್ಚುವ ಕಾರ್ಯವನ್ನು ಸರಕಾರ ತುರ್ತಾಗಿ ಆರಂಭಿಸಬೇಕು. ಹಬ್ಬದ ಸಮಯದಲ್ಲಿ ಇಂತಹ ಬೆಲೆಯೇರಿಕೆ ಕಿಸೆಗೆ ಭಾರ ಮಾತ್ರವಲ್ಲದೆ ಹಬ್ಬದ ಸಂತೋಷವನ್ನು ಕೂಡ ಕಸಿಯುತ್ತದೆ. ಹಾಗಾಗಬಾರದು. ತಕ್ಕ ಕ್ರಮಗಳನ್ನು ಆದ್ಯತೆಯಲ್ಲಿ ಕೈಗೊಂಡು ಅಗತ್ಯ ವಸ್ತುಗಳ ಅತಿಯಾದ ಬೆಲೆ ಏರಿಕೆಯಿಂದ ಜನಸಾಮಾನ್ಯರನ್ನು ರಕ್ಷಿಸುವುದು ಸರಕಾರದ ಆದ್ಯತೆಯಾಗಬೇಕು.



# ವಿದ್ಯಾರ್ಥಿ ವಿಜಯ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು
64

## ಪ್ರಜ್ಞೆಯ ಬೆಳಕು

ಜ್ಞಾನಾರ್ಜನೆ ಕೇವಲ ಅಂಕಗಳ ಸಂಪಾದನೆಯಲ್ಲ, ಬದುಕಿನ ಚಟುವಟಿಕೆಗಳ ಸಮಸ್ಯೆಗಳ ಗಂಟನ್ನು ವಿವೇಕದಿಂದ ಬಿಡಿಸುವ ಪ್ರಜ್ಞೆಯೇ ಶಿಕ್ಷಣದ ನಿಜವಾದ ಶಿಖರ. ಪಠ್ಯಪುಸ್ತಕ ದೋಣಿಯಾದರೆ, ಸಮಸ್ಯೆ ಬಗೆಹರಿಸುವ ಕೌಶಲ್ಯವೇ ಅದನ್ನು ದಡ ಸೇರಿಸುವ ಹುಟ್ಟು. ಕೌಶಲ್ಯವಿಲ್ಲದವನು ಮಾಹಿತಿಯ ಪ್ರವಾಹದಲ್ಲಿ ಮುಳುಗಿದರೆ, ಕೌಶಲ್ಯವಂತನು ಅವಕಾಶದ ತೀರ ಸೇರುತ್ತಾನೆ.

ನರವಿಜ್ಞಾನದ ಪ್ರಕಾರ, ಈ ಪ್ರಕ್ರಿಯೆಯಲ್ಲಿ ಮೆದುಳಿನ ಪ್ರಿಫ್ರಂಟಲ್ ಕಾರ್ಟೆಕ್ಸ್ ಎಚ್ಚರಗೊಂಡು ತರ್ಕ, ಸ್ಮರಣೆ ಮತ್ತು ನಿರ್ಧಾರದ ನರಜಾಲಗಳನ್ನು ಒಟ್ಟಿಗೆ ಕೆಲಸ ಮಾಡಿಸುತ್ತದೆ. ನಿತ್ಯದ ಅಭ್ಯಾಸದಿಂದ ನರಕೋಶಗಳ ನಡುವೆ ಹೊಸ ಸೇತುವೆಗಳು ಮೂಡಿ ಚಿಂತನೆಗೆ ವೇಗ, ನಿಖರತೆ ಮತ್ತು ದೂರದೃಷ್ಟಿ ಬರುತ್ತದೆ. ಇದು ಅಂಕಗಳಲ್ಲ, ಬದುಕಿನ ಆಯ್ಕೆಗಳಿಗೂ ಸ್ಥೈರ್ಯ ನೀಡುತ್ತದೆ.

ಅಂತಹ ಕೌಶಲ್ಯ ಸಿದ್ಧಿಸಿದವನು ಯಾವ ಬಿರುಗಾಳಿಯಲ್ಲೂ ಗೊಂದಲಗೊಳ್ಳುವುದಿಲ್ಲ, ಅವನಲ್ಲಿ ಆತ್ಮವಿಶ್ವಾಸದ ಆಳ, ಚಿಂತನೆಯ ಸ್ಪಷ್ಟತೆ ಮತ್ತು ನಿರ್ಧಾರದ ಶಾಂತತೆ ನೆಲೆಸುತ್ತದೆ. ಶಿಕ್ಷಕರು ಉತ್ತರ ಕೊಡುವ ಬದಲು ಪ್ರಶ್ನೆಗಳ ಕಲಿಸಿದಾಗ ತರಗತಿಯು ಪ್ರಯೋಗಾಲಯವಾಗುತ್ತದೆ. ಆಗ ಸಮಸ್ಯೆ ಪರಿಹಾರವು ಪಾಠವಲ್ಲ, ಬದುಕನ್ನು ಬೆಳಗುವ ನಂದಾದೀಪ. ಈ ಬೆಳಕು ವೈಫಲ್ಯದಲ್ಲಿ ಪಾಠ, ಯಶಸ್ಸಿನಲ್ಲಿ ವಿನಯ, ಸಮಾಜಕ್ಕೆ ದಾರಿದೀಪ. ಇದು ಭವಿಷ್ಯವನ್ನು ರೂಪಿಸುವ ಶಕ್ತಿ, ಬಾಳನ್ನು ಬೆಳಗುವ ಕೀರ್ತಿ, ವಿಶ್ವವನ್ನು ಗೆಲ್ಲುವ ಸಾಮರ್ಥ್ಯ, ಸಾರ್ಥಕತೆಯ ಪ್ರತೀಕ, ಉನ್ನತಿಯ ಮೆಟ್ಟಿಲು, ಸಾಧನೆಯ ಶಿಖರ, ಬುದ್ಧಿಯ ಬೆಳಕು, ಬದುಕಿನ ದೀಪ, ಚಿರಂತನ ಪ್ರೇರಣೆ, ಶಾಶ್ವತ ಯಶಸ್ಸು, ಸಾರ್ಥಕತೆ, ಮುಕ್ತಿಯ ಮಾರ್ಗ, ಅಂತಿಮ ಜಯ, ಪರಿಪೂರ್ಣ ಬದುಕು, ನಿತ್ಯ ಸ್ಫೂರ್ತಿ.



> ಧೀಮಂತ ವಿದ್ಯಾರ್ಥಿ ಸಮಸ್ಯೆ ಕಂಡು ಅಂಜುವುದಿಲ್ಲ, ಅದನ್ನು ಸೂಕ್ಷ್ಮವಾಗಿ ವಿಶ್ಲೇಷಿಸುತ್ತಾನೆ. ದೊಡ್ಡ ಬಂಡೆಯನ್ನು ಸಣ್ಣ ಕಲ್ಲುಗಳಾಗಿ ಒಡೆಯುವಂತೆ, ಸಮಸ್ಯೆಯನ್ನು ಸಣ್ಣ ಭಾಗಗಳಾಗಿ ವಿಭಜಿಸಿ, ಪ್ರತಿಯೊಂದಕ್ಕೂ ಹಲವು ಪರಿಹಾರ ಕಲ್ಪಿಸಿ, ತೂಗಿ ಉತ್ತಮ ಆಯ್ಕೆ ಮಾಡುವುದು ವೈಜ್ಞಾನಿಕ ಮಾರ್ಗ. ತಪ್ಪು ಹೆಜ್ಜೆಯೂ ಮುಂದಿನ ಸರಿಯಾದ ಹೆಜ್ಜೆಗೆ ದೀಪವಾಗುತ್ತದೆ ಎಂಬ ಮನೋಭಾವವೇ ಪ್ರಗತಿಯ ಬುನಾದಿ.

# ಹಸಿರ ಮಡಿಲಲ್ಲಿ ಸಾಗುವ ವಂದೇ ಭಾರತ್: ಪಶ್ಚಿಮ ಘಟ್ಟಗಳ ಸೊಬಗಿನ ಪಯಣ



ಲೇಖಕರು
ವಿಶ್ವಾಸ್ .ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

**ವಂದೇ ಭಾರತ್‌ನಂತಹ ಆಧುನಿಕ ರೈಲುಗಳು ಪ್ರವಾಸೋದ್ಯಮಕ್ಕೂ ಹೊಸ ಉತ್ತೇಜನ ನೀಡುವ ಸಾಮರ್ಥ್ಯ ಹೊಂದಿವೆ. ಕಡಿಮೆ ಸಮಯದಲ್ಲಿ ಆರಾಮದಾಯಕವಾಗಿ ಪ್ರಯಾಣಿಸುವ ಅವಕಾಶ ದೊರೆತರೆ, ರಾಜ್ಯದ ವಿವಿಧ ಭಾಗಗಳಿಗೆ ಪ್ರವಾಸ ಕೈಗೊಳ್ಳುವವರ ಸಂಖ್ಯೆಯೂ ಹೆಚ್ಚಾಗಬಹುದು.**



ಪ್ರಕೃತಿಯ ಹಸಿರು ಮಡಿಲಲ್ಲಿ, ಬೆಟ್ಟ-ಕಣಿವೆಗಳ ನಡುವೆ ತನ್ನ ಸೊಬಗಿನ ಪಯಣವನ್ನು ಮುಂದುವರಿಸುತ್ತಿರುವ ವಂದೇ ಭಾರತ್ ಎಕ್ಸ್‌ಪ್ರೆಸ್, ಆಧುನಿಕ ಭಾರತದ ವೇಗಕ್ಕೂ ಕರ್ನಾಟಕದ ನಿಸರ್ಗ ಸೌಂದರ್ಯಕ್ಕೂ ಸುಂದರ ಸೇತುವೆಯಂತಾಗಿದೆ. ಬೆಂಗಳೂರು ಮಂಗಳೂರು ನಡುವಿನ ಈ ರೈಲು ಪ್ರಯಾಣವು ಕೇವಲ ಒಂದು ನಗರದಿಂದ ಮತ್ತೊಂದು ನಗರಕ್ಕೆ ತಲುಪಿಸುವ ಸಾರಿಗೆ ವ್ಯವಸ್ಥೆಯಲ್ಲ ಪ್ರಯಾಣಿಕರಿಗೆ ವೇಗ, ಸೌಲಭ್ಯ ಮತ್ತು ಪ್ರಕೃತಿ ವೈಭವವನ್ನು ಒಂದೇ ಅನುಭವದಲ್ಲಿ ನೀಡುವ ವಿಶಿಷ್ಟ ಪಯಣವಾಗಿದೆ. ಭಾರತೀಯ ರೈಲ್ವೆಯ ಆಧುನಿಕತೆಯ ಪ್ರತೀಕವಾಗಿ ಗುರುತಿಸಿಕೊಂಡಿರುವ ವಂದೇ ಭಾರತ್ ಎಕ್ಸ್‌ಪ್ರೆಸ್, ವೇಗದ ಪ್ರಯಾಣದ ಜೊತೆಗೆ ಆರಾಮದಾಯಕ ಸೇವೆ ಮತ್ತು ಆಧುನಿಕ ಸೌಲಭ್ಯಗಳನ್ನು ಒದಗಿಸುವ ಮೂಲಕ ರೈಲು ಪ್ರಯಾಣದ ಹೊಸ ಅನುಭವವನ್ನು ಪರಿಚಯಿಸಿದೆ. ಬೆಂಗಳೂರು ನಗರದ ಗಿಜಿಗುಡಾಟದಿಂದ ಹೊರಟ ರೈಲು ನಿಧಾನವಾಗಿ ಹಸಿರು ಪರಿಸರದತ್ತ ಸಾಗುತ್ತಿದ್ದಂತೆ ಪ್ರಯಾಣಿಕರ ಕಣ್ಣುಗಳಿಗೆ ನಗರ ದೃಶ್ಯಗಳ ಬದಲಾಗಿ ಹಸಿರು ಹೊಲಗಳು, ಮರಗಿಡಗಳು, ಬೆಟ್ಟಗಳ ಸಾಲುಗಳು ಹಾಗೂ ವಿಶಾಲವಾದ ಆಕಾಶ ಕಾಣಿಸಿಕೊಳ್ಳುತ್ತವೆ.ವಿಶೇಷವಾಗಿ ಪಶ್ಚಿಮ ಘಟ್ಟಗಳ ಪ್ರದೇಶವನ್ನು ಪ್ರವೇಶಿಸಿದಾಗ ಈ ಪ್ರಯಾಣ ಮತ್ತಷ್ಟು ರಮಣೀಯವಾಗುತ್ತದೆ. ಮಲೆನಾಡಿನ ಹಸಿರು ಹೊದಿಕೆ, ಮಂಜಿನಿಂದ ಆವೃತವಾಗಿರುವ ಬೆಟ್ಟಗಳು, ಆಳವಾದ ಕಣಿವೆಗಳು, ತಿರುವು-ಮುರುವುಗಳಿಂದ ಕೂಡಿದ ಭೂಪ್ರದೇಶ ಹಾಗೂ ಅಲ್ಲಲ್ಲಿ ಕಾಣಿಸುವ ಜಲಧಾರೆಗಳು ಪ್ರಯಾಣಿಕರನ್ನು ಪ್ರಕೃತಿಯ ಲೋಕಕ್ಕೆ ಕರೆದೊಯ್ಯುತ್ತವೆ. ರೈಲಿನ ಕಿಟಕಿಯಿಂದ ಹೊರಗೆ ನೋಡುತ್ತಾ ಸಾಗುವಾಗ, ಪ್ರಕೃತಿಯೇ ತನ್ನ ಕೈಯಿಂದ ಬಿಡಿಸಿದ ವಿಶಾಲವಾದ ಚಿತ್ರಪಟವೊಂದು ಕಣ್ಣಮುಂದೆ ತೆರೆದುಕೊಳ್ಳುವ ಅನುಭವವಾಗುತ್ತದೆ. ಮಳೆಗಾಲದಲ್ಲಿ ಈ ದೃಶ್ಯಗಳ ಸೊಬಗು ಇನ್ನಷ್ಟು ಹೆಚ್ಚುತ್ತದೆ. ಮಳೆಯಿಂದ ತೊಳೆದು ಹೊಳೆಯುವ ಹಸಿರು ಎಲೆಗಳು, ಮಂಜಿನ ತೆರೆ ಹೊದ್ದ ಬೆಟ್ಟಗಳು, ತೇವಗೊಂಡ ಮಣ್ಣಿನ ಪರಿಮಳ ಮತ್ತು ಮೋಡಗಳ ನಡುವೆ ಕಾಣಿಸಿಕೊಳ್ಳುವ ಸೂರ್ಯನ ಕಿರಣಗಳು ಮಲೆನಾಡಿನ ಸೌಂದರ್ಯವನ್ನು ಮತ್ತಷ್ಟು ಗಾಢಗೊಳಿಸುತ್ತವೆ. ಕೆಲವೊಮ್ಮೆ ಮೋಡಗಳು ಬೆಟ್ಟಗಳನ್ನು ಆವರಿಸಿಕೊಂಡಾಗ ರೈಲು ಮೋಡಗಳ ಮಧ್ಯೆಯೇ ಸಾಗುತ್ತಿರುವಂತೆ ಭಾಸವಾಗುತ್ತದೆ. ಪ್ರಕೃತಿಯನ್ನು ಪ್ರೀತಿಸುವವರಿಗೆ ಇಂತಹ ಕ್ಷಣಗಳು ಜೀವನದ ಮರೆಯಲಾಗದ ನೆನಪುಗಳಾಗುತ್ತವೆ. ಬೆಂಗಳೂರು ಮಂಗಳೂರು ರೈಲು ಮಾರ್ಗವು ಕರ್ನಾಟಕದ ಭೌಗೋಳಿಕ ವೈವಿಧ್ಯತೆಯನ್ನು ಪರಿಚಯಿಸುವ ಪ್ರಮುಖ ಮಾರ್ಗಗಳಲ್ಲಿ ಒಂದಾಗಿದೆ. ಒಂದು ಕಡೆ ಆಧುನಿಕ ನಗರ ಜೀವನದ ವೇಗ, ಮತ್ತೊಂದು ಕಡೆ ಮಲೆನಾಡಿನ ಶಾಂತ, ಹಸಿರು ವಾತಾವರಣ ಈ ಎರಡನ್ನೂ ಒಂದೇ ಪಯಣದಲ್ಲಿ ಅನುಭವಿಸುವ ಅವಕಾಶ ಇಲ್ಲಿ ದೊರೆಯುತ್ತದೆ. ಪ್ರಯಾಣಿಕರು ತಮ್ಮ ಗಮ್ಯಸ್ಥಾನವನ್ನು ತಲುಪುವುದರ ಜೊತೆಗೆ ಕರ್ನಾಟಕದ ಪ್ರಕೃತಿ ಸಂಪತ್ತಿನ ವೈಭವವನ್ನೂ ಮನದಾಳದಲ್ಲಿ ತುಂಬಿಕೊಂಡು ಸಾಗುತ್ತಾರೆ. ಮಲೆನಾಡು ಮತ್ತು ಕರಾವಳಿ ಕರ್ನಾಟಕದ ಪ್ರಕೃತಿ, ಸಂಸ್ಕೃತಿ, ಆಹಾರ ಮತ್ತು ಪ್ರವಾಸಿ ತಾಣಗಳನ್ನು ಅನುಭವಿಸಲು ಬಯಸುವವರಿಗೆ ಇಂತಹ ಸಂಪರ್ಕ ವ್ಯವಸ್ಥೆಗಳು ಸಹಕಾರಿಯಾಗುತ್ತವೆ. ಒಟ್ಟಿನಲ್ಲಿ, ಬೆಂಗಳೂರುಮಂಗಳೂರು ನಡುವಿನ ವಂದೇ ಭಾರತ್ ಎಕ್ಸ್‌ಪ್ರೆಸ್ ಪ್ರಯಾಣವು ವೇಗದ ರೈಲು ಸೇವೆಯಷ್ಟೇ ಅಲ್ಲ ಅದು ಆಧುನಿಕತೆ ಮತ್ತು ಪ್ರಕೃತಿಯ ನಡುವಿನ ಸುಂದರ ಸಂವಾದವಾಗಿದೆ.

ಕಿಟಕಿಯಾಚೆ ಓಡಿಹೋಗುವ ಹಸಿರು ಬೆಟ್ಟಗಳು, ಕಣಿವೆಗಳು, ಮಂಜು ಮತ್ತು ಮೋಡಗಳನ್ನು ನೋಡುತ್ತಾ ಸಾಗುವಾಗ ಪ್ರಯಾಣದ ಅರ್ಥವೇ ಬದಲಾಗುತ್ತದೆ. ಗಮ್ಯಸ್ಥಾನ ತಲುಪುವ ಆತುರಕ್ಕಿಂತ ಪಯಣವನ್ನು ಆಸ್ವಾದಿಸುವ ಸಂತೋಷ ಹೆಚ್ಚಾಗುತ್ತದೆ. ವಂದೇ ಭಾರತ್‌ನ ವೇಗದ ಚಕ್ರಗಳು ಹಳಿಗಳ ಮೇಲೆ ಮುನ್ನಡೆಯುತ್ತಿದ್ದರೆ, ಅದರ ಕಿಟಕಿಗಳಾಚೆ ಕರ್ನಾಟಕದ ಹಸಿರು ಸೌಂದರ್ಯ ತನ್ನದೇ ಆದ ಕಥೆಯನ್ನು ಹೇಳುತ್ತಿರುತ್ತದೆ. ಹೀಗಾಗಿ ಈ ಪಯಣವು ರೈಲಿನಲ್ಲಿ ಸಾಗುವ ಪ್ರಯಾಣ ಮಾತ್ರವಲ್ಲ ವೇಗದೊಂದಿಗೆ ಪ್ರಕೃತಿಯನ್ನು ಅನುಭವಿಸುವ, ನೆನಪಿನಲ್ಲಿ ಶಾಶ್ವತವಾಗಿ ಉಳಿಯುವ ಒಂದು ಸುಂದರ ಪಯಣ.



ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

# ಬೆಂಬಲಿಗರಿಗಿಂತ ನಾಯಕ-ನಾಯಕಿಯರುಗಳನ್ನಾಗಿ ಪರಿವರ್ತನೆ ಮಾಡುವವರೇ ನಿಜವಾದ ನಾಯಕರುಗಳು

**ಬೆಂಬಲಿಗರು ಬೆಂಬಲಿಗರಾಗಿಯೇ ಇರಬಾರದು.ಅವರಲ್ಲಿ ಅರ್ಹತೆ,ಪ್ರತಿಭೆ ಮತ್ತು ಚೈತನ್ಯ ಇರುವವರನ್ನು ಗುರುತಿಸಿ ನಾಯಕರುಗಳನ್ನಾಗಿ ಪರಿವರ್ತನೆ ಮಾಡುವ ಗುಣಗಳುಳ್ಳವರೇ ನಿಜವಾದ ನಾಯಕರುಗಳು. ಕೆಲವು ಬೆಂಬಲಿಗರಿಗೆ ಅವರ ಬೇಡಿಕೆಗೆ ತಕ್ಕಂತೆ ಸವಲತ್ತುಗಳನ್ನು ಒದಗಿಸಿಕೊಟ್ಟರೆ ಬಹುಮಂದಿ ಬೆಂಬಲಿಗರು ತಂತಾನೆ ಹುಟ್ಟಿಕೊಳ್ಳುತ್ತಾರೆ.**

ನೀಲಾಕಾಶದಲ್ಲಿ ನಕ್ಷತ್ರಗಳು ಸೂರ್ಯ-ಚಂದ್ರನ ಬೆಳಕಿಗೆ ಮೋಡದಲ್ಲಿ ಮರೆಯಾಗಿರುತ್ತವೆ. ಬೆಂಬಲಿಗರು ನಕ್ಷತ್ರಗಳಾದರೆ,ಸೂರ್ಯ ಚಂದ್ರ ಜಗತ್ತಿಗೆ ಬೆಳಕು ನೀಡುವಂತೆ ನಾಯಕರುಗಳು ರಾಷ್ಟ್ರದ ಅಭಿವೃದ್ಧಿ ಹಾಗೂ ಪ್ರಗತಿಗೆ ನಾಯಕರುಗಳಾಗಬೇಕು. ಅಂದರೆ ಜಗತ್ತಿಗೆ ಬೆಳಕು ಕೊಡುವ ಸೂರ್ಯ ಚಂದ್ರ, ಹೇಗೆ ಅವಶ್ಯಕವಾಗಿರುವರೋ ಅದೇ ರೀತಿ ದೂರದೃಷ್ಟಿ ಇಟ್ಟುಕೊಂಡು ರಾಷ್ಟ್ರದಲ್ಲಿ ಬೆಳಕು ಮಾಡುವ ಪ್ರಾಮಾಣಿಕ ವ್ಯಕ್ತಿತ್ವ ಗುಣಗಳನ್ನು ಬೆಳೆಸಿಕೊಂಡಿರುವವರು ಮಾತ್ರ ನಿಜವಾದ ನಾಯಕರುಗಳಾಗಬೇಕು. ತಾನು ಬೆಳೆಯುವುದರ ಜೊತೆಗೆ ಇತರರನ್ನು ನಾಯಕರುಗಳನ್ನಾಗಿ ಬೆಳೆಸುವವರು ಹಾಗೂ ಪರಿವರ್ತನೆ ಮಾಡುವವರು ನಿಜವಾದ ನಾಯಕರುಗಳು.

ಅವರ ಬೇಡಿಕೆಗೆ ತಕ್ಕಂತೆ ಸಹಕರಿಸದಿದ್ದರೆ ಕೂಡಲೇ ತಿರಸ್ಕರಿಸುತ್ತಾರೆ. ಸಹಕರಿಸಲು ನಾಯಕರುಗಳು ಬಹಳಷ್ಟು ಹಣ,ಶ್ರಮ, ಕಾಲ ವ್ಯಯ ಮಾಡಬೇಕಾಗುತ್ತದೆ.ನಾಯಕರುಗಳು ಇಲ್ಲಿ ತಮ್ಮ ಬೆಂಬಲಿಗರಿಗೆ ಎಲ್ಲಾ ಸವಲತ್ತುಗಳೊಂದಿಗೆ ಖರ್ಚು ಮಾಡುವಷ್ಟು ಸೃಷ್ಟಿಮಾಡುವ ನಾಯಕರುಗಳಿಗೆ ಖರ್ಚು ಮಾಡುವ ಅಗತ್ಯವಿಲ್ಲ. ಇಲ್ಲಿ ಕೇವಲ ಮುಖಂಡತ್ವ ಮತ್ತು ನಾಯಕತ್ವ ಗುಣಗಳನ್ನು ಧಾರೆಯೆರೆಯಬೇಕು ಅಷ್ಟೇ !ಅಂದರೆ ಅರ್ಥ ಯಾರು ರಾಜಕೀಯ ನಾಯಕರುಗಳು ತಮ್ಮ ಬೆಂಬಲಿಗರಿಗಿಂತ ನಾಯಕ-ನಾಯಕಿಯರಾಗುವವರನ್ನು ಗುರುತಿಸಿ ಅವರುಗಳಿಗೆ ನಾಯಕತ್ವ ಮತ್ತು ಮುಖಂಡತ್ವ ಗುಣಗಳನ್ನು ಕಲಿಸುವವರೇ ನಿಜವಾದ ರಾಜಕೀಯ ಮುತ್ಸದ್ದಿಗಳು.

ಯಾರೇ ನಾಯಕರುಗಳು ತಮ್ಮ ಬೆಂಬಲಿಗರಿಗೆ ಉಚಿತವಾಗಿ ಯಾವುದೇ ಸವಲತ್ತು ನೀಡಬೇಡಿ ಹಾಗೂ ಅವರನ್ನ ಸೋಮಾರಿಗಳನ್ನಾಗಿ ಹಾಗೂ



ರಾಷ್ಟ್ರಕ್ಕೆ ಹೊರೆ ಮಾಡಬೇಡಿ ಅದರ ಬದಲಿಗೆ ಉದ್ಯೋಗ ಕಲ್ಪಿಸಿಕೊಡಿ ಅಥವಾ ಸ್ವಯಂ ಉದ್ಯೋಗ ಕಲ್ಪಿಸಿಕೊಳ್ಳಿ ಎಂದು ತಿಳುವಳಿಕೆ ನೀಡಿ. ಬೆಂಬಲಿಗರು ಹಿಂದೆ ಬೀಳದಂತೆ ನೋಡಿಕೊಳ್ಳಿ ಇದರಿಂದ ದೇಶಕ್ಕೆ ಒಳಿತಲ್ಲ ಹಾಗೂ ತಮಗೂ ಕೂಡ ಒಳ್ಳೆಯದಲ್ಲ. ಒಂದು ದಿನ ಬೆಂಬಲಿಗರಿಂದಲೇ ಪಶ್ಚಾತಾಪ ಪಡಬೇಕಾಗುತ್ತದೆ. ಬಹುತೇಕ ಬೆಂಬಲಿಗರು ಈ ದೇಶದ ಪ್ರಥಮ ಸೋಮಾರಿಗಳು. ಪ್ರೋತ್ಸಾಹ ಇದ್ದ ಕಡೆ ಕೆಲವು ಸಲ ಟೀಕೆಗೂ ಸಹ ಗುರಿಯಾಗಬೇಕಾಗುತ್ತದೆ.

**ಈ ಭಾಗವಾಗಿ ಒಂದು ವಿಶೇಷ :** 1964ರಲ್ಲಿ ಈ ದೇಶದ ಪ್ರಧಾನಿಯಾಗಿದ್ದ ಲಾಲ್ ಬಹದ್ದೂರ್ ಶಾಸ್ತ್ರಿಯವರು ರಾಷ್ಟ್ರಕ್ಕೆ ಕರೆನೀಡಿದ ಸಂದೇಶ ವೇನೆಂದರೆ,ಬೆಂಬಲಿಗರಿಗೆ ಅಥವಾ ಇತರರಿಗೆ ಮೀನನ್ನು ಉಚಿತವಾಗಿ ಕೊಡಬೇಡಿ ಅವರುಗಳಿಗೆ ಮೀನನ್ನು ಹಿಡಿಯುವುದನ್ನು ಕಲಿಸಿ ಹಾಗೂ ಹಣ ಮತ್ತು ಸವಲತ್ತುಗಳನ್ನು ಕೊಡಬೇಡಿ ಸಾಧ್ಯವಾದರೆ ಉದ್ಯೋಗ ಕಲ್ಪಿಸಿಕೊಡಿ ಅಥವಾ ಸ್ವಯಂ ಉದ್ಯೋಗಕ್ಕೆ ಪ್ರೋತ್ಸಾಹ ನೀಡಿ ಎಂದು ತಿಳಿಸಿರುವ ಸಂದೇಶವನ್ನು ಇಡೀ ರಾಷ್ಟ್ರವೇ ಸ್ವಾಗತಿಸಿದ್ದು ಇಂದು ನಾವೆಲ್ಲಾ ಆ ರಾಷ್ಟ್ರೀಯ ಸಂದೇಶವನ್ನು ಪ್ರತಿಯೊಬ್ಬ ಭಾರತೀಯ ಪ್ರಜೆ ಗಮನದಲ್ಲಿಟ್ಟು ಕೊಳ್ಳಬೇಕಾಗಿದೆ. ಇತ್ತೀಚಿಗಂತೂ ಕೆಲವು ನಾಯಕರುಗಳು ಬೆಂಬಲಿಗರ ಸಂಖ್ಯೆಯನ್ನು ಜಾಸ್ತಿ ಮಾಡಿಕೊಂಡಿದ್ದಾರೆ ಇದರಿಂದ ಅವರಿಗೂ ಒಳ್ಳೆಯದಲ್ಲ ದೇಶಕ್ಕೂ ಒಳ್ಳೆಯದಲ್ಲ. ಈ ರಾಷ್ಟ್ರದಲ್ಲಿ ನಾಯಕರುಗಳು ತಪ್ಪು ಮಾಡುವುದನ್ನು ಗುರುತಿಸಿ ಖಂಡಿಸುವ ಬೆಂಬಲಿಗರಾಗಬೇಕು. ಕೇವಲ ಸವಲತ್ತುಗಳಿಗೆ ಆಸೆಪಡುವುದು ಸಮಯ ಸಾಧಕರುಗಳು, ಅವಕಾಶವಾದಿಗಳು ಆಗಬಾರದು ಅದೆಲ್ಲಾ ಕೇವಲ ಕ್ಷಣಿಕ ಅದನ್ನು ಸದಾ ತ್ಯಜಿಸಬೇಕು.ಈ ರಾಷ್ಟ್ರ ಬಲಿಷ್ಠ ಹಾಗೂ ಪ್ರಗತಿಯಾಗಬೇಕಾದರೆ ಬೆಂಬಲಿಗರು ನಾಯಕರುಗಳಿಗಿಂತ ತುಂಬಾ ಬುದ್ಧಿವಂತರಾಗಿರಬೇಕುಹಾಗೂ ದೂರದೃಷ್ಟಿ ಉಳ್ಳವರಾಗಿರಬೇಕು.

ಆಗ ನಾಯಕರುಗಳ ತಪ್ಪನ್ನ ಕಂಡುಹಿಡಿಯಲು ಸಾಧ್ಯವಾಗುತ್ತದೆ. ಯಥಾಪ್ರಕಾರ ನಾಯಕರುಗಳು ಬೆಂಬಲಿಗರನ್ನು ಕಂಡರೆ ಭಯಪಡುತ್ತಾ ಎಚ್ಚರಿಕೆಯ ಹೆಜ್ಜೆಯನ್ನು ಇಡಲು ಪ್ರಯತ್ನ ಪಡುತ್ತಾರೆ.

ಈ ರೀತಿಯಾಗಿ ನಾವು ವಿಶ್ಲೇಷಣೆ ಮಾಡಿ ಸೋಸಿ ತೂಗಿ ನೋಡಿದಾಗ ನಾಯಕರುಗಳು ತಮ್ಮ ಬೆಂಬಲಿಗರಲ್ಲಿ ಪ್ರತಿಭೆಗಳನ್ನು ಗುರುತಿಸಿ ಅವರಲ್ಲಿ ಕೆಲವರನ್ನು ಆಯ್ಕೆ ಮಾಡಿಕೊಂಡು ನಾಯಕತ್ವ ಗುಣಗಳನ್ನು ಕಲಿಸಿ ರಾಷ್ಟ್ರಕ್ಕೆ ಸಮರ್ಪಣಾ ಭಾವದಿಂದ ಅರ್ಪಿಸುತ್ತಾರೆ.

ಆಗ ರಾಷ್ಟ್ರ ಬಲಿಷ್ಠ ಹಾಗೂ ಪ್ರಗತಿಪಥದಲ್ಲಿ ಸಾಗುತ್ತಾ ರಾಷ್ಟ್ರವು ಭದ್ರವಾಗಿರುತ್ತದೆ. ಮುಂದೆ ಭವಿಷ್ಯದಲ್ಲಿ ದೇಶ ಸರ್ವತೋಮುಖವಾಗಿ ಅಭಿವೃದ್ಧಿ ಪಥದಲ್ಲಿ ಸಾಗುತ್ತದೆ. ಒಟ್ಟಾರೆ ಯಾರೇ ನಾಯಕರುಗಳು ತಮ್ಮ-ತಮ್ಮ ಬೆಂಬಲಿಗರ ಸಂಖ್ಯೆಯನ್ನು ಜಾಸ್ತಿಮಾಡಿಕೊಳ್ಳುವುದರ ಬದಲು ನಾಯಕ-ನಾಯಕಿಯರುಗಳನ್ನಾಗಿ ಪರಿವರ್ತನೆ ಮಾಡುವವರೇ ನಿಜವಾದ ನಾಯಕರುಗಳು ಆಗ ಭವಿಷ್ಯದಲ್ಲಿ ದೇಶದ ಅಭಿವೃದ್ಧಿ ಹಾಗೂ ಪ್ರಗತಿ ಸಾಧ್ಯ.




• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ಅಗಜಾತೆಯೇ, ಶ್ರೀರಾಮನು ದರ್ಭೆಯ ಹಾಸಿನ ಮೇಲೆ ಪೂರ್ವ ದಿಕ್ಕಿಗೆ ಅಭಿಮುಖವಾಗಿ ಕುಳಿತುಕೊಂಡು, ಪರಮಭಕ್ತಿಯಿಂದ ಕೈಮುಗಿದುಕೊಂಡು ಸಮುದ್ರರಾಜನನ್ನು ಪ್ರಾರ್ಥಿಸಿ ಆನಂತರ ಅದರ ಮೇಲೆಯೇ ಮಲಗಿಕೊಂಡ ಕಪಿವೀರರೆಲ್ಲರೂ ಸೂರ್ಯವಂಶ ಸಂಭೂತನ ಕೆಲ ಬಲಗಳಲ್ಲಿ ಕುಳಿತು ಸಂತಸದಿಂದ ಶುಭಕರವಾದ ಸ್ತುತಿಗಳನ್ನು ಮಾಡುತ್ತಿದ್ದರು ಎಲ್ಲಾ ಇಂದ್ರಿಯಗಳನ್ನೂ ಮನಸಿನಲ್ಲಿ ಒಂದೆಡೆಗೆ ಸೇರಿಸಿಕೊಂಡು ಚಾಂಚಲ್ಯವನ್ನು ತೊರೆದು ವರುಣನನ್ನು ಕುರಿತು ಪ್ರಾರ್ಥನೆಗೈಯುತ್ತಿದ್ದರು. ತನ್ನ ಸುಕುಮಾರ ದೇಹವನ್ನು ದಂಡಿಸಿ ವಾನರಕುಲದೊಡನೆ ಸಮುದವನ್ನು ಇಂದೇ ದಾಟಬೇಕು, ಇಲ್ಲದಿದ್ದರೆ ದೇಹವನ್ನು ನೀಗುವುದೆಂದು ನಿಶ್ಚಯಿಸಿದ ರಘುವರನ ಪರಿಯ ಅಚ್ಚರಿಯನ್ನು ಏನು ಹೇಳಲಿ ಮಹಾಮೌನವ್ರತವನ್ನು ಧಾರಣೆ ಮಾಡಿ ತೀವ್ರತರ ಭಕ್ತಿಯಿಂದ ಸಮಾಧಿಸ್ಥಿತಿಯಲ್ಲಿ ರಘುಕುಲಾನ್ವಯಚಂದ್ರನು ಮಲಗಿದ. ಹೀಗೆಯೇ ಮೂರು ದಿನಗಳು ಕಳೆದವು ಆದರೆ ವನಧಿಯು ರಾಮನೊಡನೆ ಮಾತನಾಡಲು ಬರಲಿಲ್ಲ, ಗರ್ವದಿಂದ ಮೌನದಿಂದಲೇ ಇದ್ದ ಅದರ ರೀತಿಯನ್ನು ನೋಡಿ ರಾಮನು ಸೌಮಿತ್ರಿಯೊಡನೆ, ಪರಮಭಕ್ತಿಯಿಂದ ಕೂಡಿ ನಾನಾ ನಾನಾ ವಿಧದ ನೇಮಗಳನ್ನಾಚರಿಸುತ್ತ ಪ್ರಾರ್ಥನೆಗೈಯುತ್ತಿದ್ದರೂ ನನ್ನ ಕಡೆ ನೋಡದೆ ಅಂಬುಧಿಯು ತನ್ನ ಜಡತೆಯನ್ನು ಮುರಿಯದಿದೆ. ಅತ್ಯಂತ ಗರ್ವದಿಂದ ನನ್ನನ್ನು ಸಾಧಾರಣ ಮನುಷ್ಯನೆಂಬಂತೆ ತುಚ್ಛೀಕರಿಸಿರುವನಲ್ಲ. ಕುಜನರೊಡನೆ ಸಾಧುಜನರ ಟೆ ವಿಫಲತೆಯನ್ನು ಇದು ಸೂಚಿಸುತ್ತದೆ.ಶಮ ದಮ ತಾಳ್ಮೆ ದಾಕ್ಷಿಣ್ಯ ದೀನಪ್ರಿಯತೆ ಮಮತೆ ಧರ್ಮಾರ್ಜನಪ್ರಿಯವದತೆ ಮುಂತಾದ ಸದ್ಗುಣಗಳು ದುಷ್ಟಜನರೊಡನೆ ನಿಸ್ಸತ್ತಗೊಳ್ಳುತ್ತವೆಯೇ ಹೊರತು ಸಫಲವಾಗುವುದಿಲ್ಲ. ಯಾವನು ಔದ್ಧತ್ಯದಿಂದ ಮೆರೆಯುತ್ತ, ಎಲ್ಲರನ್ನೂ ದಂಡಿಸುತ್ತ ದಾಂಧಲೆ ಮಾಡುತ್ತಾನೆಯೋ ಅವನನ್ನು ಲೋಕವು ಗೌರವಿಸುತ್ತದೆ. ಕುಜನರು ಯಾವುದೇ ಬಗೆಯಲ್ಲಿ ಗಾಸಿಗೊಳ್ಳದೆ ತಿರುಗುತ್ತಾರೆ. ಸಾಮೋಪಾಯದಿಂದ ಗೆಲವೂ ದೊರೆಯುವುದಿಲ್ಲ. ಕೀರ್ತಿಯೂ ಬರದು. ನಯ ವಿನಯ ಮೃದುತೆ ನೇಮಗಳಿಂದ ಕೂಡಿ ನಡೆಯುವ ಸಜ್ಜನರ ಹೆಸರು ಯಾರಿಗೂ ತಿಳಿಯುವುದಿಲ್ಲ. ನೀತಿಯಿಂದ ಸೌಖ್ಯವುಂಟಾಗುವುದಿಲ್ಲ. ಧೀಮಂತನಾದವನನ್ನು ಜನ ಸ್ವೀಕರಿಸುತ್ತಾರೆಯೇ? ಭೀಮಕೋಪಾವಿಷ್ಣತೆಗಳಿಂದ ಕೂಡಿರುವ ಶತ್ರು ಸಾಮಂತರನ್ನು ರಾಜನಾದವನು ದಂಡಿಸದೆ ಹತೋಟಗೆ ' ತರಲಾದೀತೇ? ತೊಡೆಯ ಮೇಲೆ ಮಲಗಿಸಿಕೊಂಡು ಪ್ರೀತಿಯಿಂದ ಚಿರಕಾಲ ಸಾಕಿದ ಚೆಂದಮನಿಗೆ ಮೃಗಲಾಂಛನನೆಂಬ ಹೆಸರಾಯಿತೇ ಹೊರತು ಅವನನ್ನು ಸರಸಿ ಎಂದು ಕರೆಯಲಿಲ್ಲ. ಕಡು ಕೋಪಗೊಂಡು ದರ್ಪದಿಂದ ಮೃಗಸಂಕುಲವನ್ನು ಬಡಿದಿಡುತ್ತ ಬಂದರೆ ಮೃಗರಾಜನೆಂದು ಈ ಲೋಕ ಕರೆಯುತ್ತದೆ. ದೌರ್ಜನ್ಯಕ್ಕೆ ಪೂಜ್ಯತೆಯಲ್ಲದೆ ಶಮೆಗೆ ಗೌರವವಿಲ್ಲ. ಬಲಹೀನನೆನಿಸಿ, ಭಯದ ಆಗರವೆನ್ನಿಸಿ, ಸುಲಭತೆಯನ್ನು ಬಿಟ್ಟು ಸೌಖ್ಯವನ್ನು ಕೆಡಿಸಿ, ಲಲನಾಯುಜಸಮಾಜನೆಂದೆನಿಸಿ, ಜನರನ್ನು ನಾನಾ ಬಗೆಯ ಕೋಟಲೆಗಳಿಗೆ ಸಿಕ್ಕಿಸುವವರನ್ನು ಲೋಕವು ಗೌರವಿಸುವುದಲ್ಲದೆ, ಕ್ಷಮೆ ಪೂಜ್ಯತೆಗಳನ್ನುಗಳಿಸಿದವನಿಗೆ ಬೆಲೆ ನೀಡುವುದಿಲ್ಲ. ದೌಷ್ಟ್ಯವು. ಈ ಜಗತ್ತಿನಲ್ಲಿ ಪೂಜ್ಯತೆ ಹಾಗೂ ಸಿರಿಗಳನ್ನು ತಂದುಕೊಡುವುದೇ ಹೊರತು ಧರ್ಮಶಾಸ್ತ್ರಾನುಗತನೆನಿಸುವವನನ್ನು ಪ್ರಲೋಕ ಉರ್ಪಗತಂಡ ಬಗೆಯುತ್ತದೆ. ಹಾಗಾಗಿ ಯಶಸ್ಸನ್ನು ಏನಾತು ಶಮೆ ಸತ್ಕಾರ್ಯಗಳನ್ನು ಮರೆತು ದರ್ಪದಿಂದ ಕೂಡಿರಬೇಕು. ಉದಿಸಿದ, ಜೀವನಪ್ರದಾತನಾದ, ಲೋಕಹೃದಯವನ್ನು ತಿಳಿದವನಾದ ಸಮುದ್ರನನ್ನು ಮೊರೆವೊಕ್ಕು ಪ್ರಾರ್ಥನೆ ಮಾಡಿಕೊಂಡರೆ ಈತನು ಅವನ್ನೆಲ್ಲ ಅವಜ್ಞೆ ಮಾಡಿ ಕದಲದೇ ಇದ್ದಾನೆ.

ಸೌಮಿತ್ರಿ ನೋಡುತ್ತಿರು, ಈ ಜಲಧಿಯನ್ನು ಬತ್ತಿಸಿಬಿಡುತ್ತೇನೆ. ನನ್ನ ಬಿಲ್ಲುಬಾಣಗಳನ್ನು ಕೊಡು ಜಲಜಂತುಗಳ ಸಮೇತ ಈ ಕ್ರೂರ ನೀರಧಿಯನ್ನು ಬಡಿದು ದಡಕ್ಕೆ ಎಳೆತಂದು ಸಂತಾಪಗೊಳ್ಳುವಂತೆ ಮಾಡುತ್ತೇನೆ ಎಂದು ಕಿಡಿಯುಗುಳುವ ಕೋಪದಿಂದ ಬಿಲ್ಲುಬಾಣಗಳನ್ನು ಹಿಡಿದು ಮೃಡಕಲ್ಪನಾದ ಅವನ ಕೋಪಾವಿಷ್ಟ ಸ್ವರೂಪವನ್ನು ನೋಡಿ ಮೂಲೋಕಗಳೂ ಕಡುಭೀತಿಯಿಂದ ತಲ್ಲಣಗೊಂಡುವು. ಶ್ರೀರಾಮನು ತನ್ನ ಬತ್ತಳಿಕೆಯಿಂದ ಒಂದು ಅಂಬನ್ನು ಹೊರತೆಗೆದು ಬಿಲ್ಲಿಗೆ ಹೂಡಲು ಆಗಸದಲ್ಲಿ ನೆರೆದಿದ್ದ ದೇವತೆಗಳು ಓಡಿಹೋದರು, ಗಿರಿಗಳು ಅಲ್ಲಾಡಿದುವು, ಸೂರ್ಯಚಂದ್ರನಕ್ಷತ್ರಗಳು ಒಂದೆಡೆಯೊಳಿರಲಾಗದೆ ಮಿಡುಕಿದವು, ಜಗತ್ತುಗಳು ದಿಗ್ಭ್ರಮೆಗೊಂಡು ಓಲಾಡಿದುವು, ಇಂತಹ ಅದ್ಭುತವನ್ನು ಸೃಷ್ಟಿಸಿದ ರಾಮನ ಪರಾಕ್ರಮವನ್ನೆಂತು ಬಣ್ಣಿಸುವುದು.

ಮುಂದುವರೆಯುವುದು

# ಮಾನವಕುಲಕ್ಕೆ ಶಾಂತಿ, ಸತ್ಯ, ಕರುಣೆ ಮತ್ತು ಮಾನವೀಯತೆಯ ಸಂದೇಶ ಸಾರಿದ ಮಹಾನ್ ಪ್ರವಾದಿ

**ವಿಶೇಷ ವರದಿ**

ಮಾನವ ಇತಿಹಾಸದಲ್ಲಿ ಸತ್ಯ, ನ್ಯಾಯ, ಕರುಣೆ, ಸಹನೆ ಮತ್ತು ಮಾನವೀಯತೆಯ ಮೌಲ್ಯಗಳನ್ನು ತಮ್ಮ ಜೀವನದ ಮೂಲಕ ಸಾರಿದ ಮಹಾನ್ ವ್ಯಕ್ತಿತ್ವಗಳಲ್ಲಿ ಹಜರತ್ ಪ್ರವಾದಿ ಮೊಹಮ್ಮದ್ ಅವರು ಪ್ರಮುಖರು. ಇಸ್ಲಾಂ ಧರ್ಮದ ಅಂತಿಮ ಪ್ರವಾದಿಯಾಗಿ ಮುಸ್ಲಿಮರು ಗೌರವಿಸುವ ಅವರು, ಅರೇಬಿಯಾದಲ್ಲಿ ಸುಮಾರು 1,400 ವರ್ಷಗಳ ಹಿಂದೆ ಬದುಕಿ, ಏಕದೇವೋಪಾಸನೆ, ಸತ್ಯ, ನ್ಯಾಯ ಹಾಗೂ ಉತ್ತಮ ನಡತೆಯ ಸಂದೇಶವನ್ನು ಮಾನವಕುಲಕ್ಕೆ ಸಾರಿದರು. ಮಕ್ಕಾದಲ್ಲಿ ಜನನ ಹಜರತ್ ಪ್ರವಾದಿ ಮೊಹಮ್ಮದ್ ಅವರು ಕ್ರಿ.ಶ. 570ರ ಸುಮಾರಿಗೆ ಮಕ್ಕಾ ನಗರದಲ್ಲಿ ಕುರೈಶ್ ವಂಶದ ಬನು ಹಾಶಿಮ್ ಕುಟುಂಬದಲ್ಲಿ ಜನಿಸಿದರು. ಅವರ ತಂದೆ ಅಬ್ದುಲ್ಲಾಹ್ ಅವರು ಪ್ರವಾದಿಯವರ ಜನನಕ್ಕೂ ಮುನ್ನವೇ ನಿಧನರಾಗಿದ್ದರು. ಬಾಲ್ಯದಲ್ಲಿಯೇ ತಾಯಿ ಆಮಿನಾ ಅವರನ್ನೂ ಕಳೆದುಕೊಂಡ ಅವರು, ಅಜ್ಜ ಅಬ್ದುಲ್ ಮುತ್ತಲಿಬ್ ಹಾಗೂ ನಂತರ ಚಿಕ್ಕಪ್ಪ ಅಬೂ ತಾಲಿಬ್ ಅವರ ಆರೈಕೆಯಲ್ಲಿ ಬೆಳೆದರು.ಬಾಲ್ಯದಿಂದಲೇ ಸತ್ಯವಂತಿಕೆ, ಪ್ರಾಮಾಣಿಕತೆ ಮತ್ತು ಉತ್ತಮ ನಡತೆಯಿಂದ ಎಲ್ಲರ ಗೌರವಕ್ಕೆ ಪಾತ್ರರಾಗಿದ್ದರು.

ಅವರ ಪ್ರಾಮಾಣಿಕತೆಯನ್ನು ಗುರುತಿಸಿದ ಮಕ್ಕಾದ ಜನರು ಅವರನ್ನು ''ಅಲ್-ಅಮೀನ್'' ವಿಶ್ವಾಸಾರ್ಹ ವ್ಯಕ್ತಿ ಎಂದು ಕರೆಯುತ್ತಿದ್ದರು. ಹಜರತ್ ಖದೀಜಾ ಅವರೊಂದಿಗೆ ವಿವಾಹ ಯೌವನದಲ್ಲಿ ವ್ಯಾಪಾರ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದ ಪ್ರವಾದಿ ಮೊಹಮ್ಮದ್ ಅವರ ಪ್ರಾಮಾಣಿಕತೆ ಮತ್ತು ಉತ್ತಮ ನಡತೆಯಿಂದ ಪ್ರಭಾವಿತರಾದ ಹಜರತ್ ಖದೀಜಾ ಅವರು ಅವರೊಂದಿಗೆ ವಿವಾಹವಾದರು.ಪ್ರವಾದಿಯವರ ಜೀವನದಲ್ಲಿ ಹಜರತ್ ಖದೀಜಾ ಅವರು ಮಹತ್ವದ ಬೆಂಬಲವಾಗಿ ನಿಂತರು. ಪ್ರವಾದಿತ್ವದ ಆರಂಭಿಕ ದಿನಗಳಲ್ಲಿ ಎದುರಾದ ಕಷ್ಟಗಳಲ್ಲಿಯೂ ಅವರು ಧೈರ್ಯ ಮತ್ತು ಬೆಂಬಲ ನೀಡಿದರು. ಘರೆ ಹಿರಾ ಗುಹೆಯಲ್ಲಿ ಮೊದಲ ವಹೀಮಕ್ಕಾ ಸಮೀಪದ ಘರೆ ಹಿರಾ ಗುಹೆಯಲ್ಲಿ ಪ್ರಾರ್ಥನೆ ಮತ್ತು ಧ್ಯಾನದಲ್ಲಿ ತೊಡಗುತ್ತಿದ್ದ ಪ್ರವಾದಿ ಮೊಹಮ್ಮದ್ ಅವರಿಗೆ ಸುಮಾರು 40ನೇ ವಯಸ್ಸಿನಲ್ಲಿ ಮೊದಲ ದೈವಿಕ ಸಂದೇಶ (ವಹೀ) ದೊರೆಯಿತು.ಇದರೊಂದಿಗೆ ಅವರ ಪ್ರವಾದಿತ್ವದ ಜೀವನ ಆರಂಭವಾಯಿತು. ಏಕ ಅಲ್ಲಾಹನ ಆರಾಧನೆ, ಸತ್ಯ, ನ್ಯಾಯ, ದಾನ, ಬಡವರು ಮತ್ತು ದುರ್ಬಲರ ಬಗ್ಗೆ ಕಾಳಜಿ ಹಾಗೂ ಉತ್ತಮ ನಡತೆ ಅವರ ಸಂದೇಶದ ಪ್ರಮುಖ ಅಂಶಗಳಾಗಿದ್ದವು. ಮಕ್ಕಾದಲ್ಲಿ ಎದುರಿಸಿದ ಸಂಕಷ್ಟಗಳು ಪ್ರವಾದಿ ಮೊಹಮ್ಮದ್ ಅವರು ಏಕದೇವೋಪಾಸನೆಯ ಸಂದೇಶವನ್ನು ಸಾರಲು ಆರಂಭಿಸಿದಾಗ, ಮಕ್ಕಾದ ಕೆಲವು ಪ್ರಭಾವಿ ಗುಂಪುಗಳಿಂದ ತೀವ್ರ ವಿರೋಧ ಎದುರಾಯಿತು. ಪ್ರವಾದಿಯವರ ಅನುಯಾಯಿಗಳು ಕಿರುಕುಳ ಮತ್ತು ಹಲವು ಸಂಕಷ್ಟಗಳನ್ನು ಎದುರಿಸಿದರು.ಆದರೂ ಪ್ರವಾದಿಯವರು ಪ್ರತೀಕಾರದ ಮಾರ್ಗವನ್ನು ಆರಿಸದೆ, ಸಹನೆ, ಕ್ಷಮೆ, ಸತ್ಯ ಮತ್ತು ಶಾಂತಿಯ ಮಾರ್ಗವನ್ನು ಅನುಸರಿಸಿದರು. ಮದೀನಾಕ್ಕೆ ಹಿಜ್ರತ್ ಮಕ್ಕಾದಲ್ಲಿ ಪರಿಸ್ಥಿತಿ ಮತ್ತಷ್ಟು ಕಠಿಣವಾದ ಹಿನ್ನೆಲೆಯಲ್ಲಿ ಪ್ರವಾದಿ ಮೊಹಮ್ಮದ್ ಅವರು ಮದೀನಾಕ್ಕೆ ಹಿಜ್ರತ್ ಮಾಡಿದರು. ಇಸ್ಲಾಮಿಕ್ ಇತಿಹಾಸದಲ್ಲಿ ಈ ವಲಸೆ ಅತ್ಯಂತ ಮಹತ್ವದ ಘಟನೆಯಾಗಿದೆ. ಮದೀನಾದಲ್ಲಿ ಅವರು ವಿವಿಧ ಸಮುದಾಯಗಳ ನಡುವೆ ಸಹಕಾರ, ಸಾಮಾಜಿಕ ಹೊಣೆಗಾರಿಕೆ, ಪರಸ್ಪರ ಗೌರವ ಮತ್ತು ನ್ಯಾಯದ ಆಧಾರದ ಮೇಲೆ ಸಮಾಜ ನಿರ್ಮಾಣಕ್ಕೆ ಮುಂದಾದರು.**ಮಾನವೀಯತೆ ಮತ್ತು ಕರುಣೆ:** ಪ್ರವಾದಿ ಮೊಹಮ್ಮದ್ ಅವರ ಜೀವನದ ಪ್ರಮುಖ ಸಂದೇಶಗಳಲ್ಲಿ ಕರುಣೆ ಮತ್ತು ಮಾನವೀಯತೆ ಪ್ರಮುಖವಾಗಿತ್ತು. ಬಡವರು, ಅನಾಥರು, ವಿಧವೆಯರು ಮತ್ತು ದುರ್ಬಲರ ಬಗ್ಗೆ ಕಾಳಜಿ ವಹಿಸುವಂತೆ ಅವರು ಬೋಧಿಸಿದರು. ಮಕ್ಕಳೊಂದಿಗೆ ಪ್ರೀತಿಯಿಂದ ವರ್ತಿಸುವುದು, ನೆರೆಹೊರೆಯವರ ಹಕ್ಕುಗಳನ್ನು ಗೌರವಿಸುವುದು, ವ್ಯಾಪಾರದಲ್ಲಿ ಮೋಸ ಮಾಡದಿರುವುದು, ಬಡವರಿಗೆ ನೆರವಾಗುವುದು ಹಾಗೂ ಅನ್ಯಾಯದಿಂದ ದೂರವಿರುವಂತೆ ಅವರು ಕರೆ ನೀಡಿದರು. **ಮಹಿಳೆಯರ ಗೌರವ ಮತ್ತು ಹಕ್ಕುಗಳು:** ಪ್ರವಾದಿ ಮೊಹಮ್ಮದ್ ಅವರು ಮಹಿಳೆಯರ ಗೌರವ ಮತ್ತು ಹಕ್ಕುಗಳ ಕುರಿತು ಮಹತ್ವದ ಬೋಧನೆಗಳನ್ನು ನೀಡಿದರು. ತಾಯಿ, ಪತ್ನಿ, ಮಗಳು ಸೇರಿದಂತೆ ಮಹಿಳೆಯರೊಂದಿಗೆ ಗೌರವ ಮತ್ತು ಉತ್ತಮ ನಡತೆಯಿಂದ ವರ್ತಿಸುವುದು ಕುಟುಂಬ ಹಾಗೂ ಸಮಾಜದ ಪ್ರಮುಖ ಜವಾಬ್ದಾರಿಯಾಗಿದೆ ಎಂದು ಅವರು ತಿಳಿಸಿದರು. **ಮಕ್ಕಾ ವಿಜಯ ಮತ್ತು ಕ್ಷಮೆಯ ಸಂದೇಶ:** ಮಕ್ಕಾ ವಿಜಯದ ಸಂದರ್ಭದಲ್ಲಿ ಪ್ರವಾದಿ ಮೊಹಮ್ಮದ್ ಅವರ ಮುಂದೆ ದೊಡ್ಡ ಅಧಿಕಾರವಿತ್ತು. ಹಿಂದಿನ ದಿನಗಳಲ್ಲಿ ತಮ್ಮ ಹಾಗೂ ತಮ್ಮ ಅನುಯಾಯಿಗಳ ಮೇಲೆ ನಡೆದ ಕಿರುಕುಳ ಮತ್ತು ಹಿಂಸೆಗೆ ಪ್ರತೀಕಾರ ತೀರಿಸಿಕೊಳ್ಳುವ ಅವಕಾಶವಿದ್ದರೂ, ಅವರು ಕ್ಷಮೆ ಮತ್ತು ಕರುಣೆಯ ಮನೋಭಾವವನ್ನು ಪ್ರದರ್ಶಿಸಿದರು.

ಈ ಘಟನೆ ಪ್ರವಾದಿಯವರ ಕ್ಷಮೆ, ಕರುಣೆ ಮತ್ತು ಶಾಂತಿಯ ಸಂದೇಶಕ್ಕೆ ಪ್ರಮುಖ ಉದಾಹರಣೆಯಾಗಿದೆ. **ಅಂತಿಮ ಸಂದೇಶ:** ಪ್ರವಾದಿ ಮೊಹಮ್ಮದ್ ಅವರ ಜೀವನದ ಅಂತಿಮ ಅವಧಿಯಲ್ಲಿ ನೀಡಿದ ಸಂದೇಶಗಳಲ್ಲಿ ಮಾನವ ಸಮಾನತೆ, ಜೀವ ಮತ್ತು ಆಸ್ತಿಯ ಗೌರವ, ಕುಟುಂಬದ ಜವಾಬ್ದಾರಿ, ಮಹಿಳೆಯರ ಹಕ್ಕುಗಳು, ಅನ್ಯಾಯ ಮತ್ತು ಶೋಷಣೆಯಿಂದ ದೂರವಿರುವುದು ಹಾಗೂ ಪರಸ್ಪರ ಸಹೋದರತ್ವದ ಮಹತ್ವವನ್ನು ಒತ್ತಿ ಹೇಳಲಾಯಿತು. ಮನುಷ್ಯರ ನಡುವಿನ ಶ್ರೇಷ್ಠತೆಯ ಮಾನದಂಡವು ಸಂಪತ್ತು, ವಂಶ ಅಥವಾ ಸ್ಥಾನಮಾನವಲ್ಲ ಧರ್ಮನಿಷ್ಠೆ ಮತ್ತು ಉತ್ತಮ ನಡತೆ ಎಂಬ ಸಂದೇಶವನ್ನು ಅವರು ಸಾರಿದರು. ಮದೀನಾದಲ್ಲಿ ನಿಧನ: ಹಜರತ್ ಪ್ರವಾದಿ ಮೊಹಮ್ಮದ್ ಅವರು ಕ್ರಿ.ಶ. 632ರಲ್ಲಿ ಮದೀನಾದಲ್ಲಿ ನಿಧನರಾದರು. ಅವರ ಜೀವನಾವಧಿ ಸುಮಾರು 63 ವರ್ಷಗಳಾಗಿತ್ತು. ಮದೀನಾದ ಮಸ್ಜಿದ್ ಅನ್-ನಬವಿಯ ಪಕ್ಕದಲ್ಲಿರುವ ಪವಿತ್ರ ಕೋಣೆಯಲ್ಲಿ ಅವರ ಸಮಾಧಿ ಇದೆ. **ಪ್ರವಾದಿಯವರ ಜೀವನ ನಮಗೆ ನೀಡುವ ಸಂದೇಶ:** ಹಜರತ್ ಪ್ರವಾದಿ ಮೊಹಮ್ಮದ್ ಅವರ ಜೀವನ ಚರಿತ್ರೆ ಕೇವಲ ಧಾರ್ಮಿಕ ಇತಿಹಾಸವಲ್ಲ ಅದು ಸತ್ಯ, ಪ್ರಾಮಾಣಿಕತೆ, ಸಹನೆ, ಕ್ಷಮೆ, ಕರುಣೆ, ನ್ಯಾಯ ಮತ್ತು ಮಾನವೀಯತೆಯ ಪಾಠವಾಗಿದೆ. ಅವರ ಜೀವನದಿಂದ ನಾವು ಸತ್ಯವನ್ನು ಪಾಲಿಸುವುದು, ಅನ್ಯಾಯವನ್ನು ತೊರೆಯುವುದು, ಬಡವರು ಮತ್ತು ದುರ್ಬಲರಿಗೆ ನೆರವಾಗುವುದು, ನೆರೆಹೊರೆಯವರ ಹಕ್ಕುಗಳನ್ನು ಗೌರವಿಸುವುದು, ಎಲ್ಲರೊಂದಿಗೆ ಕರುಣೆಯಿಂದ ವರ್ತಿಸುವುದು ಮತ್ತು ಸಮಾಜದಲ್ಲಿ ಶಾಂತಿ ಹಾಗೂ ಸಹೋದರತ್ವವನ್ನು ಬೆಳೆಸುವ ಸಂದೇಶವನ್ನು ಪಡೆಯಬಹುದು. ಹಜರತ್ ಪ್ರವಾದಿ ಮೊಹಮ್ಮದ್ ಅವರ ಜೀವನ ಮತ್ತು ಬೋಧನೆಗಳು ಇಂದಿಗೂ ಕೋಟ್ಯಂತರ ಜನರಿಗೆ ನೈತಿಕತೆ, ಆಧ್ಯಾತ್ಮಿಕತೆ, ಶಾಂತಿ ಮತ್ತು ಮಾನವೀಯತೆಯ ಮಾರ್ಗದರ್ಶನ ನೀಡುತ್ತಿವೆ. ಪ್ರವಾದಿ ಮೊಹಮ್ಮದ್ ಅವರ ಹುಟ್ಟುಹಬ್ಬದ ಪ್ರಯುಕ್ತ ಎಲ್ಲರಿಗೂ ಶಾಂತಿ, ಸೌಹಾರ್ದತೆ ಮತ್ತು ಮಾನವೀಯತೆಯ ಶುಭಾಶಯಗಳು.



ಮೊಹಮ್ಮದ್ ನಾಸೀರ್
ಬರಹಗಾರರು ಅರಸೀಕೆರೆ

# ಶ್ರೀ ಮಂದಿರ್ ಆಪ್‌ನಿಂದ ಅಂತಿಮ ಶ್ರಾವಣ ಸೋಮವಾರದಂದು 1 ಕೋಟಿ 'ಓಂ ನಮಃ ಶಿವಾಯ' ಜಪ

**ಪ್ರಯಾಗ್‌ರಾಜ್:** ಅಂತಿಮ ಶ್ರಾವಣ ಸೋಮವಾರದ ಪ್ರಯುಕ್ತ ಶ್ರೀ ಮಂದಿರ್ ಆಪ್ ವತಿಯಿಂದ ಪ್ರಯಾಗ್ ರಾಜ್‌ನ ಶ್ರೀಸೋಮೇಶ್ವರ ಮಹಾದೇವ ದೇವಸ್ಥಾನದಲ್ಲಿ 1,000 ಬ್ರಾಹ್ಮಣರಿಂದ 1 ಕೋಟಿ 'ಓಂ ನಮಃ ಶಿವಾಯ' ಮಹಾಮಂತ್ರ ಜಪ ಮತ್ತು 1,000 ಲೀಟರ್ ಗಂಗಾಜಲದಿಂದ ಮಹಾರುದ್ರಾಭಿಷೇಕ ನೆರವೇರಿಸಲಾಯಿತು.

ಶ್ರೀಮಂದಿರ್ ಆಪ್ ಆಯೋಜಿಸಿದ್ದ ಈವರೆಗಿನ ಅತಿದೊಡ್ಡ ಪೂಜೆ ಇದಾಗಿದ್ದು, ಭಾರತ ಮತ್ತು ವಿದೇಶಗಳಿಂದ



25,000ಕ್ಕೂ ಹೆಚ್ಚು ಭಕ್ತರು ಭಾಗವಹಿಸಿದ್ದರು. ಭಕ್ತರ ಪರವಾಗಿ ದೇವಸ್ಥಾನದಲ್ಲಿ ಸಾಂಪ್ರದಾಯಿಕ ವೈದಿಕ ವಿಧಾನದಂತೆ ಪೂಜೆ ನೆರವೇರಿಸಲಾಯಿತು.

ಪೂಜೆಯಲ್ಲಿ 1 ಕೋಟಿ ಮಂತ್ರ ಜಪ, ಮಹಾರುದ್ರಾಭಿಷೇಕದ ಜೊತೆಗೆ 108 ಬಿಲ್ವಪತ್ರೆ, ಭಸ್ಮಾಭಿಷೇಕ ಮತ್ತು ಬಿಲ್ವಪತ್ರೆಯೊಂದಿಗೆ ಧತ್ತೂರ ಅರ್ಪಣೆ ಮಾಡಲಾಯಿತು. ಮಹಾರಾಷ್ಟ್ರದಿಂದ ಶೇ.23, ಕರ್ನಾಟಕದಿಂದ ಶೇ. 12, ದೆಹಲಿಯಿಂದ ಶೇ.10 ರಷ್ಟು ಭಕ್ತರು ಭಾಗವಹಿಸಿದ್ದರು. ಶ್ರೀ ಮಂದಿರ್ ಆಪ್ ನ ಸಂಸ್ಥಾಪಕ ಮತ್ತು ಸಿಇಒ ಪ್ರಶಾಂತ್ ಸಚಾನ್ ಮಾತನಾಡಿ, ಶಿವ ಭಕ್ತರಿಗೆ ಅಂತಿಮ ಶ್ರಾವಣ ಸೋಮವಾರ ಅತ್ಯಂತ ಮಹತ್ವದ ದಿನ.

ಎಲ್ಲೇ ಇದ್ದರೂ ಭಕ್ತರು ಈ ವಿಶೇಷ ಪೂಜೆಯಲ್ಲಿ ಭಾಗಿಯಾಗಲು ಅವಕಾಶ ಕಲ್ಪಿಸುವುದು ನಮ್ಮ ಉದ್ದೇಶವಾಗಿತ್ತುಎಂದರು. ದೇವಸ್ಥಾನದಲ್ಲಿ ಸಾಂಪ್ರದಾಯಿಕ ವೈದಿಕ ಸೋಮೇಶ್ವರನಾಥ ಎಂದೂ ಕರೆಯಲ್ಪಡುವ ಈ ದೇವಸ್ಥಾನ ಪ್ರಯಾಗ್‌ರಾಜ್‌ನ ಪ್ರಮುಖ ಶಿವ ದೇವಸ್ಥಾನಗಳಲ್ಲಿ ಒಂದಾಗಿದೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 12:00 ರಿಂದ 01:30 |
| ಗುಳಿಕ ಕಾಲ | ಬೆಳಿಗ್ಗೆ | 10:30 ರಿಂದ 12:00 |
| ಯಮಗಂಡ ಕಾಲ | ಬೆಳಿಗ್ಗೆ | 07:30 ರಿಂದ 09:00 |

**ಮೇಷ** ನಗು ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಪರಿಹಾರವಾದ್ದರಿಂದ ನಕ್ಕುಬಿಡಿ. ನಿಮ್ಮ ಮನೆಗೆ ಸಂಬಂಧಿಸಿದ ಹೂಡಿಕೆ ಲಾಭದಾಯಕವಾಗಿರುತ್ತದೆ. ನೀವು ಪಾರ್ಟಿ ನೀಡಲು ಯೋಜಿಸುತ್ತಿದ್ದಲ್ಲಿ ನಿಮ್ಮ ಎಲ್ಲಾ ಒಳ್ಳೆಯ ಸ್ನೇಹಿತರನ್ನು ಆಮಂತ್ರಿಸಿ ?ನಿಮ್ಮನ್ನು ಅಸ್ತುಷ್ಟಗೊಳಿಸುವ ಬಹಳಷ್ಟು ಜನರಿರುತ್ತಾರೆ.

**ವೃಷಭ** ಅನಗತ್ಯ ಆಲೋಚನೆಗಳು ನಿಮ್ಮ ಮನಸ್ಸನ್ನು ಆಕ್ರಮಿಸಿಕೊಳ್ಳಲು ಬಿಡಬೇಡಿ. ಶಾಂತವಾಗಿ ಮತ್ತು ಒತ್ತಡ ಮುಕ್ತವಾಗಿ ಉಳಿಯಲು ಪ್ರಯತ್ನಿಸಿ ಹಾಗೂ ಅದು ನಿಮ್ಮ ಮಾನಸಿಕ ದೃಢತೆಯನ್ನು ಹೆಚ್ಚಿಸುತ್ತದೆ. ನಿಮ್ಮ ಗುಂಪಿಗಾಗಿ ಸಮಾರಂಭವನ್ನು ಸಂಯೋಜಿಸುವಂತೆ ಮಾಡುತ್ತದೆ.

**ಮಿಥುನ** ದೈಹಿಕ ಲಾಭಕ್ಕಾಗಿ ವಿಶೇಷವಾಗಿ ಮಾನಸಿಕ ದೃಢತೆಗಾಗಿ ಯೋಗ ಪ್ರಾರಂಭಿಸಿ. ನೀವು ದೀರ್ಘಕಾಲದ ಆಧಾರದ ಮೇಲೆ ಹೂಡಿಕೆ ಮಾಡಿದಲ್ಲಿ ಗಣನೀಯ ಲಾಭ ಮಾಡುತ್ತೀರಿ. ಮನೆಯ ಸದಸ್ಯರೊಬ್ಬರ ವರ್ತನೆಯಿಂದ ನೀವು ತೊಂದರೆಗೊಳಗಾಗಬಹುದು. ನೀವು ಅವರೊಂದಿಗೆ ಮಾತನಾಡುವ ಅಗತ್ಯವಿದೆ.

**ಕಟಕ** ಇಂದು ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ದೀರ್ಘಕಾಲದವರೆಗೆ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದ್ದವರು, ಅವರು ಇಂದು ಎಲ್ಲಿಂದಲಾದರೂ ಹಣವನ್ನು ಪಡೆಯಬಹುದು, ಇದು ಜೀವನದ ಅನೇಕ ಸಮಸ್ಯೆಗಳನ್ನು ತೆಗೆದುಹಾಕುತ್ತದೆ. ಎಲ್ಲರನ್ನೂ ನಿಮ್ಮ ದೊಡ್ಡ ಪಾರ್ಟಿಗೆ ಕರೆಯಿರಿ.

**ಸಿಂಹ** ನೀವು ಧೀರ್ಘಕಾಲೀನ ಅನಾರೋಗ್ಯದಿಂದ ಬಳಲಬಹುದು. ಹಣದ ಪ್ರಾಮುಖ್ಯತೆ ನಿಮಗೆ ಚೆನ್ನಾಗಿ ಗೊತ್ತಿದೆ, ಆದ್ದರಿಂದ ಇಂದು ನಿಮ್ಮ ಮೂಲಕ ಉಳಿಸಲಾಗಿರುವ ಹಣ ನಿಮ್ಮ ತುಂಬಾ ಕೆಲಸಕ್ಕೆ ಬರಬಹುದು ಮತ್ತು ನೀವು ಯಾವುದೇ ದೊಡ್ಡ ಸಮಸ್ಯೆಯಿಂದ ಹೊರಬರಬಹುದು.

**ಕನ್ಯಾ** ಅದೃಷ್ಟವನ್ನು ಅವಲಂಬಿಸಬೇಡಿ, ನಿಮ್ಮ ಆರೋಗ್ಯ ಸುಧಾರಿಸಲು ಪ್ರಯತ್ನಿಸಿ ಏಕೆಂದರೆ ಅದೃಷ್ಟವು ಒಂದು ಸೋಮಾರಿ ದೇವತೆಯಾಗಿದೆ. ಯಾವುದೇ ಹಳೆಯ ಸ್ನೇಹಿತ ಇಂದು ನಿಮ್ಮ ಬಳಿ ಹಣವನ್ನು ಕೇಳಬಹುದು. ನೀವು ಅವರಿಗೆ ಸಹಾಯ ಮಾಡಿದರೆ, ನಿಮ್ಮ ಆರ್ಥಿಕ ಪರಿಸ್ಥಿತಿ ಸ್ವಲ್ಪ ತೊಂದರೆಗೊಳಗಾಗಬಹುದು.

**ತುಲಾ** ರಕ್ತದೊತ್ತಡವಿರುವ ರೋಗಿಗಳು ತಮ್ಮ ರಕ್ತದೊತ್ತಡ ಕಡಿಮೆ ಮಾಡಲು ಮತ್ತು ಕೊಲೆಸ್ಟರಾಲ್ ನಿಯಂತ್ರಣದಲ್ಲಿರಿಸಲು ಕೆಂಪು ವೈನ್ ತೆಗೆದುಕೊಳ್ಳಬಹುದು. ಇದು ಅವರಿಗೆ ಮತ್ತಷ್ಟು ವಿಶ್ರಾಂತಿ ತರುತ್ತದೆ. ಹೊಸ ಒಪ್ಪಂದಗಳು ಲಾಭದಾಯಕವೆಂದು ಕಂಡರೂ ಬಯಸಿದ ಲಾಭ ತರುವುದಿಲ್ಲ.

**ವೃಶ್ಚಿಕ** ಬೆಂಬಲ ನೀಡುವ ಸ್ನೇಹಿತರು ನಿಮ್ಮನ್ನು ಸಂತೋಷವಾಗಿರಿಸುತ್ತಾರೆ. ಯಾವುದೇ ವ್ಯಕ್ತಿಯ ಸಹಾಯವಿಲ್ಲದೆ ನೀವು ಹಣವನ್ನು ಗಳಿಸಲು ಸಾಧ್ಯವಾಗುತ್ತದೆ. ನೀವು ನಿಮ್ಮ ಮೇಲೆ ನಂಬಿಕೆಯನ್ನಿಡುವ ಅಗತ್ಯವಿದೆ. ನಿಮ್ಮ ಪತ್ನಿಯೊಂದಿಗಿನ ಸಂಬಂಧಗಳನ್ನು ಉತ್ತಮಗೊಳಿಸುವ ಒಂದು ದಿನ.

**ಧನಸ್ಸು** ಒತ್ತಡ ತೊಡೆದುಹಾಕಲು ನಿಮ್ಮ ಮಕ್ಕಳ ಜೊತೆ ನಿಮ್ಮ ಅಮೂಲ್ಯ ಸಮಯ ಕಳೆಯಿರಿ. ನೀವು ಮಗುವಿನ ಗುಣಪಡಿಸುವ ಶಕ್ತಿಯನ್ನು ಅನುಭವಿಸುತ್ತೀರಿ. ಅವರು ಭೂಮಿಯ ಮೇಲೆ ಅತ್ಯಂತ ಶಕ್ತಿಯುತ ಆಧ್ಯಾತ್ಮಿಕ ಮತ್ತು ಭಾವನಾತ್ಮಕ ವ್ಯಕ್ತಿತ್ವವಾಗಿರುತ್ತಾರೆ. ನೀವೇ ಮರುಚೈತನ್ಯ ಹೊಂದುತ್ತೀರಿ.

**ಮಕರ** ದೂರದ ಸಂಬಂಧಿಯೊಬ್ಬರಿಂದ ಒಂದು ಬಹುನಿರೀಕ್ಷಿತವಾದ ಸಂದೇಶ ಇಡೀ ಕುಟುಂಬ ಮತ್ತು ವಿಶೇಷವಾಗಿ ನಿಮಗೆ ಒಳ್ಳೆಯ ಸುದ್ದಿ ತರುತ್ತದೆ. ಇದನ್ನು ಒಂದು ವಿಶೇಷ ದಿನವಾಗಿಸಲು ದಯೆ ಮತ್ತು ಪ್ರೀತಿಯ ಸಣ್ಣ ತುಣುಕುಗಳನ್ನು ನೀಡಿ. ನಿಮ್ಮ ವೃತ್ತಿ ಅವಕಾಶಗಳನ್ನು ಹೆಚ್ಚಿಸಲು ನಿಮ್ಮ ವೃತ್ತಿಪರ ಶಕ್ತಿಯನ್ನು ಬಳಸಿ.

**ಕುಂಭ** ಆಶಾವಾದಿಗಳಾಗಿರಿ ಮತ್ತು ಜೀವನದ ಉಜ್ವಲ ಬದಿಯನ್ನು ನೋಡಿ. ನಿಮ್ಮ ಆತ್ಮವಿಶ್ವಾಸಭರಿತ ನಿರೀಕ್ಷೆಗಳು ನಿಮ್ಮ ಭರವಸೆಗಳು ಆಸೆಗಳನ್ನು ಸಾಕ್ಷಾತ್ಕಾರಗೊಳಿಸಲು ಸಹಾಯ ಮಾಡುತ್ತವೆ. ಹಣಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಯನ್ನು ಪರಿಹರಿಸಬಹುದು ನೀವು ಹಣದಿಂದ ಲಾಭ ಪಡೆಯಬಹುದು.

**ಮೀನ** ನಿಮ್ಮ ಶಾಶ್ವತವಾದ ಪ್ರೀತಿ ನಿಮ್ಮ ಪ್ರೀತಿಪಾತ್ರರಿಗೆ ಒಂದು ಸೆಲೆಯಾಗಿದೆ. ವ್ಯಾಪಾರಿಗಳು ಸಾಧ್ಯವಾದಷ್ಟು ನಿಮ್ಮ ವ್ಯವಹಾರಕ್ಕೆ ಸಂಬಂಧಿಸಿದ ವಿಷಯಗಳನ್ನು ಯಾರೊಂದಿಗೂ ಹಂಚಿಕೊಳ್ಳಬೇಡಿ. ನೀವು ಅದನ್ನು ಮಾಡಿದರೆ ದೊಡ್ಡ ತೊಂದರೆಗೆ ಸಿಲುಕಬಹುದು. ನಿಮ್ಮ ಕೆಲವು ಸ್ನೇಹಿತರು ನಿಮ್ಮ ಮನೆಗೆ ಬರಬಹುದು .

# ವಾಯುವ್ಯ ಸಾರಿಗೆ ಸಂಸ್ಥೆ ಸೆಪ್ಟೆಂಬರ್‌ನಿಂದ ಸಂಪೂರ್ಣ ಡಿಜಿಟಲೀಕರಣ

**ಕೆಎಸ್‌ಆರ್‌ಟಿಸಿ ಹೊರತುಪಡಿಸಿ ಸಾರಿಗೆ ಇಲಾಖೆಯಲ್ಲಿ ಎಚ್‌ಆರ್‌ಎಂಎಸ್ ಸಾಫ್ಟ್‌ವೇರ್ ಹಾಗೂ ಆ್ಯಪ್ ಪರಿಚಯಿಸಿದ 2ನೇ ಸಂಸ್ಥೆ ಎಂಬ ಹೆಗ್ಗಳಿಕೆಗೆ ಎನ್‌ಡಬ್ಲ್ಯು ಕೆಆರ್‌ಟಿಸಿ ಪಾತ್ರವಾಗಿದೆ.**

• **ಉದಯವಾಹಿನಿ ಹುಬ್ಬಳ್ಳಿ:**

ವಾಯುವ್ಯ ಸಾರಿಗೆ ಸಂಸ್ಥೆ ಸಂಪೂರ್ಣವಾಗಿ ಡಿಜಿಟಲೀಕರಣಗೊಂಡಿದೆ. ಇದು ಆಡಳಿತ ವ್ಯವಸ್ಥೆಯಲ್ಲಿ ಪಾರದರ್ಶಕತೆ, ನೌಕರಸ್ನೇಹಿ ವ್ಯವಸ್ಥೆ ಹಾಗೂ ಕಾರ್ಯಕ್ಷಮತೆ ವೃದ್ಧಿ ಹಾಗೂ ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ (ಎಚ್‌ಆರ್‌ಎಂಎಸ್)ನ್ನು ಅಳವಡಿಸಿಕೊಳ್ಳುವ ಮೂಲಕ ಹೊಸ ಹೆಜ್ಜೆ ಇಟ್ಟಿದೆ.

ವ್ಯವಸ್ಥೆಯ ಪ್ರಾಯೋಗಿಕತೆ ಯಶಸ್ವಿಯಾಗಿದ್ದು, ಸದ್ಯ ಮೊದಲ ಹಂತದಲ್ಲಿ ಹುಬ್ಬಳ್ಳಿ ಕೇಂದ್ರ ಕಚೇರಿ ಹಾಗೂ ಹುಬ್ಬಳ್ಳಿ ವಿಭಾಗದಲ್ಲಿ ಅನುಷ್ಠಾನಗೊಳಿಸಲಾಗಿದೆ. ಸೆಪ್ಟೆಂಬರ್‌ನಿಂದ ಸಂಸ್ಥೆ ವ್ಯಾಪ್ತಿಯ ಎಲ್ಲಾ ವಿಭಾಗಗಳಲ್ಲೂ ಎಚ್‌ಆರ್‌ಎಂಎಸ್ ಲಭ್ಯವಾಗಲಿದ್ದು, ಸಾರಿಗೆ ನೌಕರರಿಗೆ ಆ್ಯಪ್ ಮೂಲಕ ಬೆರಳು ಆಂಚಿನಲ್ಲೇ ಸಮಗ್ರ ಮಾಹಿತಿ ದೊರೆಯಲಿದೆ. ಕೆಎಸ್‌ಆರ್‌ಟಿಸಿ ಹೊರತುಪಡಿಸಿ ಸಾರಿಗೆ ಇಲಾಖೆಯಲ್ಲಿ ಎಚ್‌ಆರ್‌ಎಂಎಸ್ ಸಾಫ್ಟ್‌ವೇರ್ ಹಾಗೂ ಆ್ಯಪ್ ಪರಿಚಯಿಸಿದ 2ನೇ ಸಂಸ್ಥೆ ಎಂಬ ಹೆಗ್ಗಳಿಕೆಗೆ ಎನ್‌ಡಬ್ಲ್ಯು, ಕೆಆರ್‌ಟಿಸಿ ಪಾತ್ರವಾಗಿದೆ.

ಹಾಜರಾತಿ, ವೇತನ ಪ್ರಕ್ರಿಯೆ, ಬಡ್ತಿ, ವರ್ಗಾವಣೆ, ರಜೆ ನಿರ್ವಹಣೆ, ಸೇವಾ ದಾಖಲಾತಿ, ಆಡಳಿತಾತ್ಮಕ ಪ್ರಕ್ರಿಯೆ ಹೀಗೆ ಎಲ್ಲದರ ಮಾಹಿತಿಯನ್ನು ಡಿಜಿಟಲೀಕರಣಗೊಳಿಸಿ ಸುಲಭ ನಿರ್ವಹಣೆಗೆ ಸಹಕಾರಿಯಾಗುವ ಸಾಫ್ಟ್‌ವೇರ್ ಹಾಗೂ ಆ್ಯಪ್ ಇದಾಗಿದೆ. ಇದರಿಂದ ಮಾನವ ಸಂಪನ್ಮೂಲ, ಖರ್ಚು– ವೆಚ್ಚ ಉಳಿತಾಯದ ಜೊತೆಗೆ ಸಾರಿಗೆ ನೌಕರರು ಪ್ರತಿಯೊಂದು ಮಾಹಿತಿಗಾಗಿಯೂ ಕಚೇರಿಗೆ ಅಲೆದಾಡುವುದು, ವಾರಗಟ್ಟಲೇ



ಉದಯವಾಹಿನಿ ಚಿತ್ರ

> ಈ ಕುರಿತಂತೆ ವಾಯುವ್ಯ ಸಾರಿಗೆ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕಿ ಪ್ರಿಯಾಂಗಾ ಎಂ. ಅವರು ಪ್ರತಿಕ್ರಿಯೆ ನೀಡಿ, ಬೇರೆ ಸಂಸ್ಥೆಗಳಿಗೆ ಹೋಲಿಕೆ ಮಾಡಿದರೆ ಸಾರಿಗೆ ಸಂಸ್ಥೆಯಲ್ಲಿ ಮಾನವ ಸಂಪನ್ಮೂಲ ಹೆಚ್ಚಿಗೆ ಇರುತ್ತದೆ. ಇದರ ನಿರ್ವಹಣೆ ಮಾಡಲು ಪ್ರಾಯೋಗಿಕವಾಗಿ ಹೆಚ್‌ಆರ್‌ಎಂಎಸ್ ಅನ್ನು ಕಳೆದ 6 ತಿಂಗಳಿಂದ ಹಂತ ಹಂತವಾಗಿ ಕಾರ್ಯರೂಪಕ್ಕೆ ತರಲಾಗುತ್ತಿದೆ. ಸೆಪ್ಟೆಂಬರ್ 1 ರಿಂದ ಪರಿಪೂರ್ಣವಾಗಿ ಜಾರಿಯಾಗಲಿದೆ ಎಂದರು.

ಕಾಯುವುದು ತಪ್ಪಲಿದೆ. ಬೆಂಗಳೂರಿನ 'ಕ್ಯಾರಿಟರ್' ಕಂಪನಿಯು ಎಚ್‌ಆರ್‌ಎಂಎಸ್ ತಂತ್ರಾಂಶ ಸಿದ್ಧಪಡಿಸಿದ್ದು, ನಿರ್ವಹಣೆಗಾಗಿ 5 ವರ್ಷಗಳವರೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ.

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಧಾರವಾಡ, ಬೆಳಗಾವಿ, ಉತ್ತರ ಕನ್ನಡ, ಬಾಗಲಕೋಟೆ, ಗದಗ, ಹಾವೇರಿ

> ಕೆಎಸ್‌ಆರ್‌ಟಿಸಿ ಹೊರತುಪಡಿಸಿದರೆ ಈ ತಂತ್ರಜ್ಞಾನ ಅಳವಡಿಸಿಕೊಳ್ಳುತ್ತಿರುವ ಎರಡನೇ ಸಂಸ್ಥೆಯಾಗಿದೆ. ಅದಕ್ಕಿಂತಲೂ ಒಂದಿಷ್ಟು ವಿಭಿನ್ನವಾಗಿ ಅಭಿವೃದ್ಧಿಪಡಿಸಲಾಗಿದೆ. ಇದರಲ್ಲಿ ನೌಕರರ ಶಿಸ್ತು ಕ್ರಮದ ಕುರಿತಂತೆ ಇದರಲ್ಲಿ ಮಾಹಿತಿ ಸಿಗಲಿದೆ. ಅಪಘಾತ, ಚಾರ್ಜ್ ಶೀಟ್, ಶಿಕ್ಷೆಯಾಗಿದ್ದರೆ ಆ ಮಾಹಿತಿಯ ಇದರಲ್ಲಿ ಲಭ್ಯವಾಗಲಿದೆ ಎಂದರು.

ಸೇರಿ 6 ಜಿಲ್ಲೆ, 9 ವಿಭಾಗಗಳನ್ನು ಒಳಗೊಂಡಿದೆ.

ಸಂಸ್ಥೆಯಲ್ಲಿ 22 ಸಾವಿರ ನೌಕರರಿದ್ದು, ಈವರೆಗೂ ಅವರ ಎಲ್ಲಾ ದಾಖಲೆಗಳನ್ನು ಕಾಗದದಲ್ಲೇ ನಿರ್ವಹಣೆ ಮಾಡಬೇಕಿತ್ತು. ಹೀಗಾಗಿ ಪ್ರತಿಯೊಂದು ಕೆಲಸವು ನಿಧಾನವಾಗಿ ನಡೆಯುತ್ತಿತ್ತು. ಇದೀಗ ಸಾರಿಗೆ ನೌಕರರು ಬಳಸಲು ಎಚ್‌ಆರ್‌ಎಂಎಸ್ ಆ್ಯಪ್

### ಮೊಬೈಲ್ ಆ್ಯಪ್‌ನಲ್ಲೇ ನಿರ್ವಹಣೆ

> ಈವರೆಗೆ ಹಾಜರಾತಿ ನಮೂದು, ರಜೆ, ಬಡ್ತಿ, ಅಪಘಾತ ಹಾಗೂ ಅಶಿಸ್ತು ನಡವಳಿಕೆ ಕಂಡುಬಂದರೆ ನೌಕರರ ವಿರುದ್ಧ ಕ್ರಮ, ವರ್ಗಾವಣೆ, ಇವೆಲ್ಲವೂ ಮ್ಯಾನ್ಯುಯೆಲ್ ಆಗಿ ನಡೆಯುತ್ತಿತ್ತು. ಇನ್ನು ಮುಂದೆ ಎಚ್‌ಆರ್‌ಎಂಎಸ್ ಮೂಲಕವೇ ನಿರ್ವಹಿಸಲಾಗುತ್ತದೆ. ಪ್ರತಿದಿನದ ಹಾಜರಾತಿ, ತಮಗೆ ಯಾವ ದಿನ ರಜೆ ಬೇಕು ಎಂಬುದನ್ನು ನೌಕರರು ಎಚ್‌ಆರ್‌ಎಂಎಸ್ ಮೊಬೈಲ್ ಆ್ಯಪ್‌ನಲ್ಲೇ ನಮೂದಿಸಬಹುದು. ಅಲ್ಲಿಯೇ ಪರಿಶೀಲಿಸಿಕೊಳ್ಳಬಹುದು.

ಹಾಗೂ ಆಡಳಿತದ ದೃಷ್ಟಿಯಿಂದ ಕಚೇರಿಗಳಲ್ಲಿ ದಾಖಲೆಗಳ ನಿರ್ವಹಣೆಗೆ ಸಾಫ್ಟ್‌ವೇರ್ ಸಿದ್ಧಪಡಿಸಲಾಗಿದೆ. ಇದರಿಂದ ಸಮಯ, ಕಾಗದ ಬಳಕೆ ಉಳಿತಾಯದ ಜೊತೆಗೆ ಎಲ್ಲಾ ಪ್ರಕ್ರಿಯೆಗಳು ವೇಗವಾಗಿ ನಡೆಯಲಿವೆ. ಅಲ್ಲದೇ, ನಿಖರ ಮಾಹಿತಿ ದೊರೆಯಲಿದೆ.ಓರ್ವ ನೌಕರ ಕೆಲಸಕ್ಕೆ ಹಾಜರಾದ ದಿನದಿಂದ ನಿವೃತ್ತಿಯವರೆಗೂ ಎಲ್ಲ ಮಾಹಿತಿ ಹೆಚ್‌ಆರ್‌ಎಂಎಸ್‌ನಲ್ಲಿ ಅಳವಡಿಕೆ ಮಾಡಲಾಗತ್ತದೆ. ನೌಕರರ ಎಲ್ಲಾ ಮಾಹಿತಿ ಒಂದೇ ಕ್ಲಿಕ್ ಅಲ್ಲಿ ಲಭ್ಯವಾಗಲಿದೆ. ಅವರ ಬಗ್ಗೆ ಮಾಹಿತಿ ಇಲ್ಲ, ಸಂಬಳ ಬಂದಿಲ್ಲ ಎಂಬ ಸಮಸ್ಯೆ ಇರುವುದಿಲ್ಲ. ಇದರಿಂದ ದೂರುಗಳ ಸಂಖ್ಯೆ ಕಡಿಮೆಯಾಗಲಿದೆ. ನೌಕರರಿಗೆ ವಿಶ್ವಾಸ ಹೆಚ್ಚಾಗಲಿದೆ ಎಂದರು.

## ಸಿ.ಪಿ.ಐ.ಮನಗುಳಿ ನೇತೃತ್ವದಲ್ಲಿ ಈದ್ ಮಿಲಾದ್ ಶಾಂತಿ ಸಭೆ

• **ಉದಯವಾಹಿನಿ ವಿಜಯಪುರ:**

ವಿಜಯಪುರ ಜಿಲ್ಲೆಯ ಚಡಚಣ ತಾಲ್ಲೂಕಿನ ಜನಸ್ನೇಯ ಪೋಲಿಸ್ ಠಾಣೆಯಲ್ಲಿ ಆಗಸ್ಟ್ 26, 2026 ರಂದು ನಡೆಯಲಿರುವ ಈದ್ ಮಿಲಾದ್ ಹಬ್ಬವನ್ನು ಶಾಂತಿ ಮತ್ತು ಸೌಹಾರ್ದತೆಯಿಂದ ಆಚರಿಸಲು ರಾಜ್ಯದ ವಿವಿಧೆಡೆ ಪೊಲೀಸ್ ಇಲಾಖೆಯ ನೇತೃತ್ವದಲ್ಲಿ ಶಾಂತಿ ಸಭೆಗಳನ್ನು ನಡೆಸಲಾಗಿದೆ. ಅಂದಹಾಗೆ ವಿಜಯಪುರ ಜಿಲ್ಲೆಯ ಚಡಚಣ ಜನಸ್ನೇಹಿ ಪೊಲೀಸ್ ಠಾಣೆಯಲ್ಲಿ ಸಿ.ಪಿ.ಐ ಪರಶುರಾಮ ಮನಗುಳಿ ಅವರ ನೇತೃತ್ವದಲ್ಲಿ ಸಭೆ ಕರೆಯಲಾಗಿತ್ತು.

ಸಭೆಯನ್ನ ಉದ್ದೇಶಿಸಿ ಮಾತನಾಡಿದ ಅವರು ಹಬ್ಬವನ್ನು ಶಾಂತಿಯಿಂದ ಆಚರಿಸಲು ಸಹಕರಿಸುವಂತೆ ಅವರು ಕೋರಿದರು. ಎಲ್ಲರೂ ಕಾನೂನು ಸುವ್ಯವಸ್ಥೆ ಪಾಲಿಸಬೇಕು ಎಂದು ಸೂಚಿಸಿದರು.

**ಮೆರವಣಿಗೆ ಮಾರ್ಗ:** ನಿಗದಿತ ಮಾರ್ಗಗಳಲ್ಲಿ ಮಾತ್ರ ಮೆರವಣಿಗೆ ನಡೆಸಬೇಕು ಮತ್ತು ಸಂಚಾರಕ್ಕೆ ಯಾವುದೇ ರೀತಿಯ ಅಡಚಣೆ ಉಂಟಾಗದಂತೆ ಎಚ್ಚರಿಕೆ ವಹಿಸಬೇಕು.

**ಸಾಮಾಜಿಕ ಜಾಲತಾಣಗಳ ಮೇಲೆ ನಿಗ**

ಸೌಹಾರ್ದತೆಗೆ ಧಕ್ಕೆ ತರುವ ಅಥವಾ ಪ್ರಚೋದನಕಾರಿ ಸಂದೇಶಗಳನ್ನು ಹಂಚಿಕೊಳ್ಳುವವರ ವಿರುದ್ಧ ಕಠಿಣ ಕಾನೂನು


ಉದಯವಾಹಿನಿ ಚಿತ್ರ

ಕ್ರಮ ಕೈಗೊಳ್ಳಲಾಗುವುದು.

**ಆಡಳಿತ ವರ್ಗದ ಸಹಕಾರ:** ಸಾರ್ವಜನಿಕರು ಮತ್ತು ವಿವಿಧ ಸಮುದಾಯಗಳ ಮುಖಂಡರು ಪೊಲೀಸ್ ಇಲಾಖೆಯೊಂದಿಗೆ ಕೈಜೋಡಿಸಿ ಹಬ್ಬದ ಯಶಸ್ಸಿಗೆ ಸಹಕರಿಸಬೇಕು. ಈ ಸಂದರ್ಭದಲ್ಲಿ ಮಲ್ಲು ಧೋತ್ರೆ, ರಾಜು ಕೋಳಿ, ಮೃತ್ಯುಂಜಯ ನದಾಫ್, ಫಯಾಜ್ ಮುಲ್ಲಾ ,ಬಾಬುಸಾಹೇಬ್ ಕೊಂಕಣಿ, ಅಮೀನಸಾಬ್ ಟಪಾಲ್, ಸಲೀಂ ಅರಿಕೇರಿ. ಬಾಲಾಜಿ ಗಾಡಿವಡ್ಡರ್, ಅಜೀದ್ ಮುಸ್ತಿ, ದೇವಪ್ಪ ಪಾಟೀಲ, ಮುಕ್ತ್ ಕಡಿಕೆ, ಆಮೀನಸಾಬ್ ಅತ್ತಾರ್, ಮುಬಾರಕ್ ನದಾಫ್, ಭಾಷಾಸಾಬ್ ಬಿಳಿಗಿ, ಮೈಬೂಬಸಾಬ್ ಸೌದಾಗರ್, ಧರ್ಮೋ ಬನ್ಸೋಡೆ, ಸಂಜು ಪರಿಟ್,ಮಿರಾ ಅತ್ತಾರ ಹಾಗೂ ಗ್ರಾಮದ ಹಿರಿಯರು ಗ್ರಾಮಸ್ಥರು ಉಪಸ್ಥಿತರಿದ್ದರು.

## 1.10 ಲಕ್ಷ ರೂ. ಪರಿಹಾರ ನೀಡಲು ಕ್ರೆಡಿಟ್ ಸಂಸ್ಥೆಗೆ ಜಿಲ್ಲಾ ಗ್ರಾಹಕ ಆಯೋಗದ ಆದೇಶ

• **ಉದಯವಾಹಿನಿ ಶಿವಮೊಗ್ಗ:**

ಮುನ್ಸೂಚನೆ ನೀಡದೇ ಏಕಾಏಕಿ ವಾಹನ ಜಪ್ತಿ ಮಾಡಿ ಮಾರಾಟ ಮಾಡಿದ್ದ ಟಿವಿಎಸ್ ಕ್ರೆಡಿಟ್ ಸರ್ವಿಸಸ್ ಸಂಸ್ಥೆಯ ವಿರುದ್ಧ ಶಿವಮೊಗ್ಗ ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗವು ತೀರ್ಪು ನೀಡಿದೆ. ಅಷ್ಟೇ ಅಲ್ಲದೇ ದೂರುದಾರರಿಗೆ ವಾಹನವನ್ನು ಹಿಂತಿರುಗಿಸುವಂತೆ ಹಾಗೂ ರೂ.1.10 ಲಕ್ಷ ಪರಿಹಾರ ಪಾವತಿಸುವಂತೆ ಆದೇಶಿಸಿದೆ.

ಶಿವಮೊಗ್ಗದ ತುಂಗಾನಗರ ನಿವಾಸಿ ಶಾಬಾಜ್ ಎಸ್. ಅವರು ತಮ್ಮ ಜೀವನೋಪಾಯಕ್ಕಾಗಿ ರೂ.15,10,147 ಸಾಲ ಪಡೆದು ಐಷರ್ ಪ್ರೊ 30009 ಗೂಡ್ಸ್ ವಾಹನವನ್ನು ಖರೀದಿಸಿದ್ದರು. ತಿಂಗಳಿಗೆ ರೂ.44,361 ಇಎಂಐ ನಿಗದಿಯಾಗಿದ್ದು, 5 ಕಂತುಗಳನ್ನು ಪಾವತಿಸಿ 4 ಕಂತುಗಳ ಬಾಕಿ ಉಳಿಸಿಕೊಂಡಿದ್ದರು. ದಿನಾಂಕ 31/12/2024 ರಂದು ವಾಹನವು ಕೆಲಸದ ನಿಮಿತ್ತ ಹಾಸನಕ್ಕೆ ತೆರಳಿದ್ದ ವೇಳೆ, ಯಾವುದೇ ಪೂರ್ವ ಮಾಹಿತಿ ಅಥವಾ ತಿಳಿವಳಿಕೆ ಪತ್ರ ನೀಡದೇ ಟಿವಿಎಸ್ ಕ್ರೆಡಿಟ್ ಸಂಸ್ಥೆಯು ವಾಹನವನ್ನು ಜಪ್ತಿ ಮಾಡಿಕೊಂಡಿತ್ತು. ನಂತರ ಆರ್‌ಬಿಐ ಮಾರ್ಗಸೂಚಿಗಳನ್ನು ಪಾಲಿಸದೇ ವಾಹನವನ್ನು ಹರಾಜು ಮೂಲಕ ಮಾರಾಟ ಮಾಡಲಾಗಿದೆ ಎಂದು 02/02/2025


ಉದಯವಾಹಿನಿ ಚಿತ್ರ

ರಂದು ನೋಟಿಸ್ ನೀಡಿ, ಬಾಕಿ ವ್ಯತ್ಯಾಸ ಮೊತ್ತ ರೂ.4,84,204 ಪಾವತಿಸುವಂತೆ ದೂರುದಾರರಿಗೆ ತಾಕೀತು ಮಾಡಿತ್ತು.

ಇದನ್ನು ಪ್ರಶ್ನಿಸಿ ಶಾಬಾಜ್ ಅವರು ಜಿಲ್ಲಾ ಗ್ರಾಹಕ ಆಯೋಗದ ಮೆಟ್ಟಿಲೇರಿದ್ದರು. ವಿಚಾರಣೆ ನಡೆಸಿದ ಆಯೋಗವು, ಆರ್‌ಬಿಐ ಮಾರ್ಗಸೂಚಿ ಉಲ್ಲಂಘನೆ ಮತ್ತು ಹೈಕೋರ್ಟ್‌ನ ತೀರ್ಪುಗಳನ್ನು ಪರಿಗಣಿಸಿ ಹಣಕಾಸು ಸಂಸ್ಥೆಯ ನಡೆ ಸೇವಾ ನ್ಯೂನ್ಯತೆ ಮತ್ತು ಅನುಚಿತ ವ್ಯವಹಾರ ಪದ್ಧತಿ ಎಂದು ತೀರ್ಮಾನಿಸಿದೆ.

**ವಾಹನ ವಾಪಸಾತಿಗೆ ಆದೇಶ:** ಆದೇಶ ನೀಡಿದ 45 ದಿನಗಳ ಒಳಗೆ ಐಷರ್ ವಾಹನವನ್ನು ದೂರುದಾರರ ವಶಕ್ಕೆ ನೀಡಬೇಕು. ವಿಫಲವಾದಲ್ಲಿ, ದಿನಾಂಕದಿಂದ ವಾಹನ ಹಸ್ತಾಂತರಿಸುವವರೆಗೆ ದಿನವೊಂದಕ್ಕೆ ರೂ.2,000 ದಂಡ ಪಾವತಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

## ರೈತರಿಗೆ ನಾರಾಯಣಪುರ ಎಡದಂಡೆ ಕಾಲುವೆ ಮುಖಾಂತರ ನೀರು ಹರಿಸುವಂತೆ ಆಗ್ರಹಿಸಿ ಅಭಿಯಂತರ – ಕಚೇರಿ ಎದುರು ಪ್ರತಿಭಟನೆ

• **ಉದಯವಾಹಿನಿ ವಿಜಯಪುರ:**

ವಿಜಯಪುರ ಜಿಲ್ಲೆಯ ಚಡಚಣ ತಾಲ್ಲೂಕಿನ ನಾರಾಯಣಪುರ ಎಡದಂಡೆ ಕಾಲುವೆ ಡಿಸ್ಟ್ರಿಬ್ಯೂಟರ್ 132 ರಿಂದ 172 ರವರೆಗಿನ ಕಾಲುವೆ ಮೂಲಕ ತಾಲ್ಲೂಕಿನ ಶಿರಾಢೋಣ/ದಸೂರ ಗ್ರಾಮದ ಕೊನೆಯವರೆಗೂ ನೀರು ಹರಿಸಬೇಕು. ಮೂರು ಸಾರಿ ನೀರಿನ ಪಾಳ್ಳಿ ಟೇಲ್ ಎಂಡಿಂಗ ಮುಟ್ಟಿಲ್ಲ ಆದಕಾರಣ

ಕರ್ನಾಟಕ ರಾಜ್ಯ ರೈತೋದಯ ಹಸಿರು ಸೇನೆ ರಾಜ್ಯ ಉಪಾಧ್ಯಕ್ಷ ಹಾಗೂ ಬಿಜಾಪುರ ಜಿಲ್ಲಾಧ್ಯಕ್ಷರಾದ ನಾಗನಾಥಗೌಡ ಬಿರಾದಾರ ಮಾತನಾಡಿ, ಇಂಡಿ ತಾಲ್ಲೂಕಿನ ರೈತರಿಗೆ ಯಾವುದೇ ರೀತಿಯ ನೀರಿನ ಸಮಸ್ಯೆ ಎದುರಾಗಿಲ್ಲ.

ನಾಗಠಾಣ ಮತಕ್ಷೇತ್ರದ ಚಡಚಣ ತಾಲೂಕಿನ ಕೊನೆಯ ಭಾಗದ ರೈತರಿಗೆ ಕಾಲುವೆ ನೀರು ಹರಿಸುವಲ್ಲಿ ಅಧಿಅಧಿಕಾರಿಗಳು ತಾರತಮ್ಯ ಧೋರಣೆ ಅನುಸರಿಸುತ್ತಿದ್ದಾರೆ. ಜನ ಜಾನುವಾರುಗಳಿಗೆ ಕುಡಿವ ನೀರಿನ ಅಭಾವ ಉಂಟಾಗುತ್ತಿದ್ದು, ಶೀಘ್ರ ನೀರು ಹರಿಸಲು ಕ್ರಮ ಕೈಗೊಳ್ಳಬೇಕು,'' ಎಂದು ಆಗ್ರಹಿಸಿದರು.

ಕಾಲುವೆ ಮೂಲಕ ಗಡಿಭಾಗಕ್ಕೆ ನೀರು ಬರಬೇಕಾದ ಗ್ರಾಮಗಳಿಗೆ ಹಲಸಂಗಿ


ಉದಯವಾಹಿನಿ ಚಿತ್ರ

ಏಳಗಿ ಪಿ ಎಚ್ ಮಣಂಕಲಗಿ, ತದ್ದೇವಾಡಿ ಕೆರೂರು, ಗೋಡಿಹಾಳ, ಲೋಣಿ ಬಿಕೆ, ಹವಿನಾಳ, ಹತ್ತಳ್ಳಿ, ದಸೂರ, ರೇವತಗಾಂವ ಗ್ರಾಮಗಳಲ್ಲಿ ಜನ ಜಾನುವಾರುಗಳಿಗೆ ಕುಡಿಯುವ ನೀರಿ ಇಲ್ಲಾ ಆದಕಾರಣ ನೀರು ಕಾಲುವೆಗೆ ನೀರು ಬೀಡಿ ಎಂದ ರೈತರು. ಝುಳಕಿಯ ಕೆಬಿಜೆಎನ್ ಎಲ್ ಕಚೇರಿ ಆವರಣದಲ್ಲಿ ರಾಜ್ಯ ರೈತ ಸಂಘ ಹಾಗೂ

> **ರೈತರ ಮನವೊಲಿಸಲು ಮುಂದಾದ ಅಧಿಕಾರಿಗಳು**
> ಎಡದಂಡೆ ಡಿಸ್ಟ್ರಿಬ್ಯೂಟರ್ ಕಾಲುವೆ ಮೂಲಕ ಕೊನೆಯ ಹಂತದವರೆಗೆ ನೀರು ಹರಿಸಲು ಕ್ರಮ ಕೈಗೊಳ್ಳಲಾಗುವುದು. ರೈತರು ಸಹಕರಿಸಬೇಕು. ಆದರು ರೈತರಿಗೆ ಮನವರಿಕೆ ಮಾಡಲು ಮುಂದಾದ kbjnl ಅಧಿಕಾರಿಗಳು.ಸಂತೋಷ ದಾಯಗೊಡೆ – ಸಹಾಯಕ ಕಾರ್ಯಪಾಲಕ ಅಭಿಯಂತರ, ಕೆಬಿಜೆಎನ್‌ಎಲ್.- (kbjnl) ಚಂದ್ರಕಂತ ಕೋಳಿ

ಹಸಿರು ಸೇನೆಯಿಂದ ಪ್ರತಿಭಟನೆ ನಡೆಸಲಾಯಿತು.

ಮುಖಂಡರಾದ ಶಿವಾನಂದ ಬಿರಾದಾರ, ಗುರುನಾಥ ಬಗಲಿ,ಅಶೋಕ ನಡನಟ್ಟಿ, ಅಣ್ಣಾರಾಯ ಶಿರನಾಳ, ಕಾಶಿರಾಯ ಕಾಮಗೊಂಡ, ಸುರೇಶ ಸಾಲುಟಗಿ, ಮಾಹಾಂತೇಷ ಬಿರಾದಾರ, ಸುನಿಲ್ ಗಚ್ಚಿನ್ನಕಟ್ಟಿ ಅನಿಲ ಗೌಡನೂರ ಪ್ರಭಾಕರ ಗೌಡನೂರ ಇತರರು ಝುಳಕಿಯ ಕೆಬಿಜೆಎನ್ ಎಲ್ ಕಚೇರಿ ಆವರಣದಲ್ಲಿ ರಾಜ್ಯ ರೈತೋದಯ ಹಸಿರು ಸೇನೆಯಿಂದ ಪ್ರತಿಭಟನೆ ನಡೆಸಲಾಯಿತು.

## ಮೂಲ ಮಾಲೀಕರಂತೆ ನಟಿಸಿ, ಅಮಾಯಕ ವ್ಯಕ್ತಿಯ ಜಮೀನು ಮಾರಾಟ ಯತ್ನ

• **ಉದಯವಾಹಿನಿ ಬೆಳಗಾವಿ:**

ಮೂಲ ಮಾಲೀಕರಂತೆ ನಟಿಸಿ ಆಸ್ತಿ ಕಬಳಿಸಲು ಯತ್ನಿಸಿದ್ದ ಆರೋಪಿಯೊಬ್ಬನನ್ನು ಇಲ್ಲಿನ ಮಾರ್ಕೆಟ್ ಠಾಣಾ ಪೊಲೀಸರು ಬಂಧಿಸಿದ್ದಾರೆ. ಖಾನಾಪುರ ತಾಲ್ಲೂಕಿನ ಸೋನಾರವಾಡಿ ಗ್ರಾಮದ ಖಾಚು ಆನಂದ ಮೋರೆ (64) ಬಂಧಿತ ಆರೋಪಿ. ಎಸಿಪಿ ಸಂತೋಷ ಸತ್ಯನಾಯಿಕ, ಪಿಐ ಜೆ.ಎಮ್.ಕಾಲಿಮಿರ್ಚಿ ಅವರ ನೇತೃತ್ವದಲ್ಲಿ ಆರೋಪಿ ಖಾಚು ಆನಂದ ಮೋರೆಯನ್ನು ವಶಕ್ಕೆ ಪಡೆದುಕೊಂಡು ತೀವ್ರ ವಿಚಾರಣೆ ನಡೆಸಿದಾಗ, ಪ್ರಕರಣ ಬಹಿರಂಗಗೊಂಡಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಉಚಗಾಂವ ಹೋಬಳಿ ಕಡೋಲಿ ಗ್ರಾಮದ ವ್ಯಾಪ್ತಿಯಲ್ಲಿನ ಸರ್ವೆ ನಂಬರ್ 60/★/13ರ ಒಟ್ಟು 1 ಎಕರೆ ಜಮೀನನ್ನು ದೂರುದಾರ ಚಂದ್ರಕಾಂತ ಬಡಮಂಜಿ ಅವರು, ಗಣಪತಿ ಶಂಕರ ಗವಳಿ ಮತ್ತು ಮಾರುತಿ ದೇವಜಿ ಗವಳಿ ಎಂಬುವರಿಂದ ಖರೀದಿಸಿದ್ದರು. ಆ ಜಮೀನು ಚಂದ್ರಕಾಂತ ಅವರ ಕಬ್ಜಾದಲ್ಲೇ ಇತ್ತು. ಆ ಜಮೀನಿಗೆ ಆರೋಪಿ ಖಾಚು ಮೋರೆ ಕನ್ನ ಹಾಕಿದ್ದ. 2025ರ ಜುಲೈ 17ರಂದು ಬೆಳಗಾವಿ ದಕ್ಷಿಣ ಉಪ ನೋಂದಣಾಧಿಕಾರಿಗಳ ಕಾರ್ಯಾಲಯದಲ್ಲಿ ಖರೀದಿ ಪತ್ರ ನೊಂದಣಿ ಮಾಡಿ 1 ಎಕರೆ ಕೃಷಿ ಜಮೀನನ್ನು ಬೇರೆಯವರಿಗೆ ಸೇಲ್ ಡೀಡ್ ಮಾಡಿದ್ದ ಅಂತಾ ವಿಚಾರಣೆ ವೇಳೆ ಆರೋಪಿ ತಪ್ಪೊಪ್ಪಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಸುಳ್ಳು ದಾಖಲೆ ಸೃಷ್ಟಿಸಿ ಬೇರೆಯವರ ಆಸ್ತಿ ಮತ್ತೊಬ್ಬರಿಗೆ ಮಾರಾಟ ಮಾಡಿದ್ದ ಪ್ರಕರಣ ಬೇಧಿಸಿರುವ ನಮ್ಮ ಮಾರ್ಕೆಟ್ ಠಾಣೆ ಪೊಲೀಸರು, ಆರೋಪಿಯನ್ನು ಬಂಧಿಸಿದ್ದಾರೆ. ಆರೋಪಿ ವಿರುದ್ಧ ಮುಂದಿನ ಕಾನೂನು ಕ್ರಮ ಜರುಗಿಸಲಾಗಿದೆ. ಈ ರೀತಿ ವಂಚನೆ ಪ್ರಕರಣಗಳು ಹೆಚ್ಚುತ್ತಿದ್ದು, ಸಾರ್ವಜನಿಕರು ತಮ್ಮ ಆಸ್ತಿಗಳ ಮೇಲೆ ನಿಗಾ ವಹಿಸಬೇಕು. ಅದೇ ರೀತಿ ಆಸ್ತಿ ಖರೀದಿಸುವವರು ಕೂಡ ಮೂಲ ಮಾಲೀಕರು ಯಾರು ಎಂಬುದನ್ನು ಖಚಿತಪಡಿಸಿಕೊಂಡೇ, ಮುಂದುವರಿಯಬೇಕು ಎಂದು ನಗರ ಪೊಲೀಸ್ ಆಯುಕ್ತ ಭೂಷಣ ಬೊರಸೆ ಕಿವಿಮಾತು ಹೇಳಿದರು.

## ಮೂವರು ಮಕ್ಕಳೊಂದಿಗೆ ತುಂಗಾ ನದಿಗೆ ಹಾರಿದ ಮಹಿಳೆ

• **ಉದಯವಾಹಿನಿ ಶಿವಮೊಗ್ಗ:**


ಉದಯವಾಹಿನಿ ಚಿತ್ರ

ಕೌಟಂಬಿಕ ಕಲಹದ ಹಿನ್ನೆಲೆ ತಾಯಿಯೊಬ್ಬಳು ತನ್ನ ಮೂವರು ಮಕ್ಕಳೊಂದಿಗೆ ತುಂಗಾ ನದಿಗೆ ಹಾರಿದ ಘಟನೆ ಸೋಮವಾರ ನಡೆದಿದೆ. ಶಿವಮೊಗ್ಗದ ಅರಕೆರೆಯ ದೇವಾಲಯ ಪಕ್ಕದ ರೈಲ್ವೆ ಸೇತುವೆ ಬಳಿ ತಾಯಿ ತನ್ನ ಮೂವರು ಮಕ್ಕಳೊಂದಿಗೆ ನದಿಗೆ ಹಾರಿದ್ದು, ಇದನ್ನು ಗಮನಿಸಿದ ನವೀನ್ ಹಾಗೂ ದಾದಪೀರ್ ಎಂಬ ಯುವಕರು ತಮ್ಮ ಜೀವದ ಹಂಗು ತೊರೆದು ನದಿಗೆ ಹಾರಿದ್ದ ತಾಯಿ ಹಾಗೂ 11 ತಿಂಗಳ ಗಂಡು ಮಗುವನ್ನು ರಕ್ಷಿಸಿದ್ದಾರೆ. ಆದರೆ, 6 ಮತ್ತು 4 ವರ್ಷದ ಇಬ್ಬರು ಹೆಣ್ಣು ಮಕ್ಕಳು ನದಿಯಲ್ಲಿ ತೇಲಿ ಹೋಗಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.ಸ್ಥಳಕ್ಕೆ ಕೋಟೆ ಪೊಲೀಸರು ಹಾಗೂ ಅಗ್ನಿಶಾಮಕ ದಳದವರು ಆಗಮಿಸಿ ಶೋಧ ನಡೆಸಲು ಮುಂದಾದರು. ನದಿಯಲ್ಲಿ ನೀರಿನ ಹರಿವು ಹೆಚ್ಚಾದ ಕಾರಣದಿಂದ ಶೋಧ ಕಾರ್ಯ ನಡೆಸಲು ಆಗದೇ ವಾಪಸ್ ಅಗಿದ್ದಾರೆ.

ಕೌಟಂಬಿಕ ಕಲಹದ ಹಿನ್ನೆಲೆ ಚಿತ್ರದುರ್ಗ ಮೂಲದ ಭವಾನಿ ಎಂಬ ಮಹಿಳೆ ತನ್ನ ಮೂರು ಮಕ್ಕಳೊಂದಿಗೆ ನದಿಗೆ ಹಾರಿದ್ದು, ತಾಯಿ ಹಾಗೂ ಒಂದು ಮಗುವನ್ನು ರಕ್ಷಿಸಲಾಗಿದೆ. ರಕ್ಷಣೆಗೆ ಒಳಗಾದ ಇಬ್ಬರನ್ನೂ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಇವರು ಹಾಲಿ ದಾವಣಗೆರೆ ಜಿಲ್ಲೆಯ ಸವಳಂಗದಲ್ಲಿ ನೆಲೆಸಿದ್ದರು ಎಂಬುವುದು ಪ್ರಾಥಮಿಕ ಮಾಹಿತಿಯಲ್ಲಿ ಗೊತ್ತಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಸ್ಥಳಕ್ಕೆ ಎಎಸ್ಪಿ ಕಾರ್ಯಪ್ಪ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ತಾಯಿ ಮತ್ತು ಮಗವನ್ನು ರಕ್ಷಿಸಿದ ದಾದಾಪೀರ್ ಮಾತನಾಡಿ, ''ರೈಲ್ವೆ ಬ್ರಿಡ್ಜ್‌ನಿಂದ ತಾಯಿಯೊಬ್ಬಳು ತನ್ನ ಮೂವರು ಮಕ್ಕಳನ್ನು ಹಿಡಿದುಕೊಂಡು ನದಿಗೆ ಹಾರಿದ್ದರು. ಈ ದೃಶ್ಯ ಕಂಡ ತಕ್ಷಣ ನಾವು ನದಿಗೆ ಹಾರಿ ತಾಯಿ ಮತ್ತು ಒಂದು ಮಗುವನ್ನು ಕಾಪಾಡಿದ್ದೇವೆ. ಆದರೆ, ಇಬ್ಬರು ಮಕ್ಕಳನ್ನು ಕಾಪಾಡಲು ಸಾಧ್ಯವಾಗಲಿಲ್ಲ. ನದಿಗೆ ಹಾರಿದ್ದು ಏಕೆ ಎಂಬ ಬಗ್ಗೆ ಕಾರಣ ಗೊತ್ತಿಲ್ಲ. ನಮ್ಮ ಕೈಯಲ್ಲಿ ಎಷ್ಟು ಸಾಧ್ಯವೂ ಅಷ್ಟು ಸಹಾಯ ಮಾಡಿದ್ದೇವೆ. ತಾಯಿ–ಮಗುವನ್ನು ಸೇಫ್ ಮಾಡಿದ್ದೇವೆ. ಮಹಿಳೆ ಚಿತ್ರದುರ್ಗದವರು ಎಂಬ ಮಾಹಿತಿ ಇದೆ'' ಎಂದು ತಿಳಿಸಿದರು.

## ಲಕ್ಷಾಂತರ ಮೌಲ್ಯದ ಐರನ್ ಸಿರಪ್, ವಿಟಮಿನ್ – ಸಿ ಮಾತ್ರೆ ತಿಪ್ಪೆಗೆ!

• **ಉದಯವಾಹಿನಿ ಗಂಗಾವತಿ:**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಪೂರೈಕೆಯಾಗಿರುವ ಲಕ್ಷಾಂತರ ರೂಪಾಯಿ ಮೊತ್ತದ ಕಬ್ಬಿಣಾಂಶ, ಫೋಲಿಕ್ ಆಸಿಡ್ ಮಾತ್ರೆ, ಸಿರಪ್ ಹಾಗೂ ವಿಟಮಿನ್ – ಸಿ ಮಾತ್ರೆಗಳ ರಾಶಿಯನ್ನು ತಿಪ್ಪೆಗೆ ಎಸೆದಿ ಘಟನೆ ಜಯನಗರದ ಬೈಪಾಸ್ ರಸ್ತೆಯಲ್ಲಿ ನಡೆದಿದೆ. ಈ ಮಾತ್ರೆಗಳನ್ನು ಮಹಿಳೆಯರು, ಬಾಣಂತಿಯರು, ಗರ್ಭಿಣಿಯರು ಮತ್ತು ರಕ್ತಹೀನತೆಯಿಂದ ಬಳಲುವ ಶಾಲಾ ಮಕ್ಕಳು, ಅಂಗನವಾಡಿ ಕೇಂದ್ರದ ಶಿಶುಗಳ ಆರೋಗ್ಯಕ್ಕಾಗಿ ಸರ್ಕಾರಿ ಆಸ್ಪತ್ರೆ ಹಾಗೂ ಆರೋಗ್ಯ ಇಲಾಖೆಯಿಂದ ಉಚಿತವಾಗಿ ವಿತರಿಸಲಾಗುತ್ತಿದೆ. ಈ ಔಷಧಗಳು 2027ರವರೆಗೆ ಬಳಕೆಗೆ ಯೋಗ್ಯವಿದೆ. ಆದಾಗ್ಯೂ ಇಲ್ಲಿ ತಂದು ರಸ್ತೆಯ ಬದಿಯಲ್ಲಿರುವ ತಿಪ್ಪೆಯಲ್ಲಿ ಹಾಕಿ ಹೋಗಿರುವುದು ಯಾರು ಎಂಬ ಶಂಕೆ ಇದೀಗ ವ್ಯಕ್ತವಾಗಿದೆ. ಸರ್ಕಾರ ಕೋಟಿಗಟ್ಟಲೆ ಹಣ ಸುರಿದು ಬಡವರ ಆರೋಗ್ಯದ ಬಗ್ಗೆ ಕಾಳಜಿಗಾಗಿ ಔಷಧ ಪೂರೈಸುತಿದೆ. ಆದರೆ, ಕೆಲವರ ಅಲಕ್ಷ್ಯದಿಂದ ಹೀಗೆ ಬೀದಿ ಪಾಲಾಗುತ್ತಿರುವುದು ಕಳವಳ


ಉದಯವಾಹಿನಿ ಚಿತ್ರ

ಮೂಡಿಸಿದೆ ಎಂದು ಸ್ಥಳೀಯರು ಬೇಸರ ಹೊರಹಾಕಿದ್ದಾರೆ. ಈ ಮಾರ್ಗದಲ್ಲಿ ಬೆಳಗ್ಗೆ ವಾಯು ವಿಹಾರಕ್ಕೆ ತೆರಳಿದ ಕೆಲವರು ತಿಪ್ಪೆಯಲ್ಲಿ ಔಷಧಗಳ ರಾಶಿ ಕಂಡು ಹೌಹಾರಿದ್ದಾರೆ. ಕೂಡಲೇ ಈ ಬಗ್ಗೆ ತಮ್ಮ ಮೊಬೈಲ್‌ಗಳಲ್ಲಿ ದೃಶ್ಯಗಳನ್ನು ಸೆರೆ ಹಿಡಿದಿದ್ದಾರೆ. ಅವಧಿ ಮುಗಿದ ಔಷಧಗಳನ್ನು ಅಥವಾ ಬಳಕೆ ಮಾಡಿದ ಔಷಧ ತಾಜ್ಯವನ್ನು ಸುರಕ್ಷಿತವಾಗಿ ವಿಲೇವಾರಿ ಮಾಡಬೇಕು ಎಂಬ ನಿಯಮವಿದೆ. ಆದರೆ, ದುರುದ್ದೇಶ ಪೂರ್ವಕವಾಗಿ ಇಲ್ಲಿ ತಂದು ಎಸೆದು ಹೋಗಲಾಗಿದೆ. ಬೈಪಾಸ್ ರಸ್ತೆಬದಿಯ ಕಸದ ರಾಶಿಯಲ್ಲಿ ಆರೋಗ್ಯ ಇಲಾಖೆಯ ಮುದ್ರೆ ಇರುವ ಬೃಹತ್ ಪ್ರಮಾಣದ ಔಷಧಗಳ ಪೊಟ್ಟಣಗಳು ಕಂಡುಬಂದಿವೆ. ಅವುಗಳಲ್ಲಿ ಮುಖ್ಯವಾಗಿ, ಕಬ್ಬಿಣಾಂಶದ ಕೊರತೆ ನೀಗಿಸುವ ಸಿರಪ್,

> ಡಿಎಚ್‌ಒ ಪ್ರತಿಕ್ರಿಯೆ: ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ. ಈಶ್ವರ ಸವುಡಿ, ''ಘಟನೆ ಗಮನಕ್ಕೆ ಬಂದಿದೆ. ತಕ್ಷಣ ಸಂಬಂಧಿತ ಅಧಿಕಾರಿಗಳನ್ನು ಸ್ಥಳಕ್ಕೆ ಕಳುಹಿಸಿ ಪರಿಶೀಲಿಸಲಾಗಿದೆ. ವರದಿ ತರಿಸಿಕೊಂಡು ಪರಿಶೀಲಿಸಲಾಗುವುದು. ಯಾರೆ ತಪ್ಪು ಮಾಡಿದರು ಕ್ರಮ ಕೈಗೊಳ್ಳಲಾಗುವುದು'' ಎಂದು ತಿಳಿಸಿದ್ದಾರೆ.

ವಿಟಮಿನ್–ಸಿ ಮಾತ್ರೆಗಳು ಕಂಡು ಬಂದಿದೆ. ಸಾರ್ವಜನಿಕರಿಗೆ ತಲುಪಬೇಕಿದ್ದ ಈ ಅಗತ್ಯ ಔಷಧಗಳನ್ನು ಸೂಕ್ತ ರೀತಿಯಲ್ಲಿ ವಿತರಿಸದೆ, ಕಸದ ರಾಶಿಗೆ ಚೆಲ್ಲಿರುವುದು ನೋವಿನ ಸಂಗತಿ. ಈ ಕೂಡಲೇ ಸಂಬಂಧಪಟ್ಟ ಜಿಲ್ಲಾ ಆರೋಗ್ಯಾಧಿಕಾರಿ ಹಾಗೂ ಮೇಲಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಕಸದ ಪಾಲಾದ ಈ ಔಷಧಗಳ ಬ್ಯಾಚ್ ಸಂಖ್ಯೆ ಆಧರಿಸಿ, ಯಾವ ಆಸ್ಪತ್ರೆ ಅಥವಾ ಗೋದಾಮಿನಿಂದ ಇವು ರವಾನೆಯಾಗಿದ್ದವು ಎಂಬುದನ್ನು ಪತ್ತೆಹಚ್ಚಿ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

## ಮಂತ್ರಾಲಯ ರಾಯರ ಮಠದ ಹುಂಡಿ ಎಣಿಕೆ 19 ದಿನದಲ್ಲಿ 2.81 ಕೋಟಿ ಕಾಣಿಕೆ ಸಂಗ್ರಹ

• **ಉದಯವಾಹಿನಿ ರಾಯಚೂರು:**


ಉದಯವಾಹಿನಿ ಚಿತ್ರ

ಕಲಿಯುಗದ ಕಾಮಧೇನು ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿ ಮಠದ ಆಗಸ್ಟ್ ತಿಂಗಳಿನ 19 ದಿನದ ಕಾಣಿಕೆ ಹುಂಡಿ ಎಣಿಕೆ ಮುಕ್ತಾಯವಾಗಿದ್ದು, 2.81 ಕೋಟಿ ರೂ. ಕಾಣಿಕೆ ಹರಿದುಬಂದಿದೆ. ಪ್ರತಿ ತಿಂಗಳಿನಂತೆ ಈ ಬಾರಿಯೂ ಭಕ್ತರ ದಂಡು ಮಠಕ್ಕೆ ಹರಿದು ಬಂದಿದ್ದು, ಕೇವಲ 19 ದಿನದಲ್ಲಿ ಒಟ್ಟು 2,81,69,135 ರೂ. ಕಾಣಿಕೆ ಸಂಗ್ರಹವಾಗಿದೆ. ಸಂಗ್ರಹವಾದ ಒಟ್ಟು ಕಾಣಿಕೆಯಲ್ಲಿ 2,73,34,635 ರೂ. ಕರೆನ್ಸಿ ನೋಟುಗಳು ಹಾಗೂ 8,34,500 ರೂ. ನಾಣ್ಯಗಳು ಹರಿದುಬಂದಿದೆ. ಜೊತೆಗೆ ಭಕ್ತರು 94 ಗ್ರಾಂ ಚಿನ್ನ, 515 ಗ್ರಾಂ ಬೆಳ್ಳಿಯನ್ನ ಕಾಣಿಕೆ ರೂಪದಲ್ಲಿ ನೀಡಿದ್ದಾರೆ.

ಮಂತ್ರಾಲಯ ರಾಯರ ಮಠದಲ್ಲಿ ನಡೆಸಲಾದ ಹುಂಡಿ ಎಣಿಕೆ ಕಾರ್ಯ ಮುಕ್ತಾಯವಾಗಿದ್ದು, ಎಣಿಕೆ ಕಾರ್ಯದಲ್ಲಿ ಮಠದ ನೂರಾರು ಸಿಬ್ಬಂದಿ, ಭಜನಾ ಮಂಡಳಿ, ಕರ ಸೇವಕರು ಭಾಗವಹಿಸಿದ್ದರು. ಮುಜರಾಯಿ ಇಲಾಖೆ ಅಧಿಕಾರಿಗಳು, ಶ್ರೀಮಠದ ಅಧಿಕಾರಿಗಳು ಹುಂಡಿ ಎಣಿಕೆ ವೇಳೆ ಹಾಜರಿದ್ದರು. ಆಗಸ್ಟ್ 27 ರಿಂದ 7 ದಿನಗಳ ಕಾಲ ರಾಯರ 355ನೇ ಆರಾಧನಾ ಮಹೋತ್ಸವ ನಡೆಯಲಿದ್ದು, ಈ ಹಿನ್ನೆಲೆ ಹುಂಡಿ ಎಣಿಕೆ ಕಾರ್ಯವನ್ನ ಮುಗಿಸಲಾಗಿದೆ.

# ಡಿಜಿಟಲ್ ಲೋಕದಲ್ಲಿ ತುಳು ಭಾಷೆಯ ಗರಿಮೆ ಹೆಚ್ಚಿಸಿದ 'ತುಳು ವಿಕಿಪೀಡಿಯಾ': 3,800ಕ್ಕೂ ಅಧಿಕ

**ಆರಂಭದಲ್ಲಿ ಕೇವಲ 500 –1000 ಲೇಖನಗಳಿಂದ ಶುರುವಾದ ತುಳು ವಿಕಿಪೀಡಿಯಾ ಇಂದು 3,800ಕ್ಕೂ ಅಧಿಕ ಲೇಖನಗಳನ್ನು ಒಳಗೊಂಡಿದೆ.**

• **ಉದಯವಾಹಿನಿ ಮಂಗಳೂರು:**

ಕರಾವಳಿಯ ಶ್ರೀಮಂತ ಭಾಷೆ ಮತ್ತು ಸಂಸ್ಕೃತಿಯನ್ನು ಜಾಗತಿಕ ಡಿಜಿಟಲ್ ವೇದಿಕೆಯಲ್ಲಿ ದಾಖಲಿಸುವ ಮಹತ್ವಾಕಾಂಕ್ಷೆಯೊಂದಿಗೆ ಆರಂಭವಾದ 'ತುಳು ವಿಕಿಪೀಡಿಯಾ' ಯಶಸ್ವಿಯಾಗಿ 10 ವರ್ಷಗಳನ್ನು ಪೂರೈಸಿ ದಶಮಾನೋತ್ಸವದ ಸಂಭ್ರಮದಲ್ಲಿದೆ.

> **1 : 3,800ಕ್ಕೂ ಅಧಿಕ ಲೇಖನಗಳು**
> **2 : ಭಾರತದ 23ನೇ ಭಾಷೆಯಾಗಿ ತುಳು**
> **3 : ಸಂಶೋಧನಾತ್ಮಕ ಬರಹಗಳು**

ಪ್ರಾಚೀನ ದ್ರಾವಿಡ ಭಾಷೆಯಾದ ತುಳುವಿನ ಅಕ್ಷರಮಾಲೆ, ಸಂಸ್ಕೃತಿ, ಆಚಾರ – ವಿಚಾರ, ಸಾಹಿತ್ಯ ಹಾಗೂ ಜಾನಪದ ಸಿರಿವಂತಿಕೆಯನ್ನು ಇಂಟರ್ನೆಟ್ ಜಗತ್ತಿಗೆ ಪರಿಚಯಿಸುವಲ್ಲಿ ತುಳು ವಿಕಿಪೀಡಿಯಾ ನಿರ್ಣಾಯಕ ಪಾತ್ರ ವಹಿಸಿದೆ.

**8 ವರ್ಷಗಳ ತಪಸ್ಸು ಇನ್‌ಕ್ಯುಬೇಟರ್‌ನಿಂದ ಲೈವ್ ಆದ ಕಥೆ:** ತುಳು ವಿಕಿಪೀಡಿಯಾ ನಿರ್ಮಾಣದ ಕಾರ್ಯವು 2008 ರಲ್ಲೇ ಆರಂಭಗೊಂಡಿತಾದರೂ, ಆರಂಭದಲ್ಲಿ ಬರೆಯುವವರ ಕೊರತೆ ಹಾಗೂ ಲೇಖನಗಳ ಸಂಖ್ಯೆ ಕಡಿಮೆಯಿದ್ದ ಕಾರಣ ಸುಮಾರು 8 ವರ್ಷಗಳ ಕಾಲ 'ಇನ್‌ಕ್ಯುಬೇಟರ್' ಹಂತದಲ್ಲೇ ಉಳಿದುಕೊಂಡಿತ್ತು.


ಉದಯವಾಹಿನಿ ಚಿತ್ರ

ವಿಕಿಮೀಡಿಯಾ ಫೌಂಡೇಶನ್ ನಿಗದಿಪಡಿಸಿದ್ದ 1,000 ಲೇಖನಗಳ ಗುರಿ ತಲುಪಲು ಬೆಂಗಳೂರಿನ ಸಿಐಎಸ್–ಎ2ಕೆ ಸಂಸ್ಥೆಯ ಸಂಯೋಜಕರಾದ ಪವನಜ ಹಾಗೂ ಸ್ಥಳೀಯ ಸಂಪಾದಕರ ತಂಡ ನಿರಂತರ ಶ್ರಮಿಸಿತು. ಅಂತಿಮವಾಗಿ 2016ರ ಆಗಸ್ಟ್ 6 ರಂದು ಚಂಡೀಗಢದಲ್ಲಿ ನಡೆದ ವಿಕಿಕಾನ್ಫರೆನ್ಸ್ ಇಂಡಿಯಾ ಸಮಾವೇಶದಲ್ಲಿ ಭಾರತದ 23ನೇ ಭಾಷೆಯಾಗಿ ತುಳು ವಿಕಿಪೀಡಿಯಾ ಅಧಿಕೃತವಾಗಿ ಲೈವ್ ಆಯಿತು.

**3,800ಕ್ಕೂ ಅಧಿಕ ಲೇಖನಗಳು:** ಆಟಿ ತಿಂಗಳಿಂದ ದೈವಾರಾಧನೆಯವರೆಗೆ ಸಮಗ್ರ ದಾಖಲೆ– ಆರಂಭದಲ್ಲಿ ಕೇವಲ

> **ಸಂಶೋಧನಾತ್ಮಕ ಬರಹಗಳು:** ಕಳೆದ ವರ್ಷವೊಂದರಲ್ಲೇ ಆಟಿ ತಿಂಗಳ ಆಚರಣೆ ಮತ್ತು ಖಾದ್ಯಗಳ ಕುರಿತು ಸುಮಾರು 300 ಲೇಖನಗಳನ್ನು ರಚಿಸಲಾಗಿದೆ. ಅರಸಿನ ಎಲೆಯ ಗಟ್ಟಿ ಮಾಡುವ ವಿಧಾನದ ಜೊತೆಗೆ ಅದರ ಔಷಧೀಯ ಗುಣ, ಆರೋಗ್ಯ ಮಹತ್ವ ಮತ್ತು ಸಾಂಸ್ಕೃತಿಕ ಹಿನ್ನೆಲೆಯನ್ನು ಒಳಗೊಂಡ ಲೇಖನಗಳನ್ನು ಸಿದ್ಧಪಡಿಸಿರುವುದು ವಿಶೇಷ.

> ತುಳು ಲಿಪಿ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಈ ವೇದಿಕೆ ಉತ್ತಮ ಮಾಧ್ಯಮವಾಗಿದೆ. ಮುಂದಿನ 10 ವರ್ಷಗಳಲ್ಲಿ ಲೇಖನಗಳ ಸಂಖ್ಯೆಯನ್ನು 10,000ದಿಂದ 20,000ಕ್ಕೆ ಹೆಚ್ಚಿಸುವ ಸಂಕಲ್ಪ ನಮ್ಮದಾಗಿದೆ ಎನ್ನುತ್ತಾರೆ.

500 –1000 ಲೇಖನಗಳಿಂದ ಶುರುವಾದ ತುಳು ವಿಕಿಪೀಡಿಯಾ ಇಂದು 3,800ಕ್ಕೂ ಅಧಿಕ ಲೇಖನಗಳನ್ನು ಒಳಗೊಂಡಿದೆ. ವಿಷಯ ವೈವಿಧ್ಯ: ತುಳುನಾಡಿನ ದೈವಾರಾಧನೆ, ಆಟಿಕಳಂಜೆ, ಸೋಣದ ಜೋಗಿ, ಪತ್ತನಾಜೆ, ಭೂತಕೋಲ, ತುಳು ಸಾಹಿತ್ಯ, ಗಣ್ಯ ವ್ಯಕ್ತಿಗಳ ಪರಿಚಯ, ಭೂಗೋಳ, ವಿಜ್ಞಾನ ಹಾಗೂ ಭಾಷೆಗಳಿಗೆ ಸಂಬಂಧಿಸಿದ ಲೇಖನಗಳು ಇಲ್ಲಿ ಲಭ್ಯವಿವೆ. ಸಂಪೊಲಿಪುನ ಲೇಸ್ ಮತ್ತು ಮಹಿಳಾ ಸಂಪಾದಕರ ಪಾತ್ರ: ಕರಾವಳಿ ವಿಕಿಮೀಡಿಯನ್ ಯೂಸರ್ ಗ್ರೂಪ್‌ನ ನೇತೃತ್ವದಲ್ಲಿ

> ತುಳು ಭಾಷೆಯಲ್ಲಿ ಪ್ರದೇಶದಿಂದ ಪ್ರದೇಶಕ್ಕೆ (ಮಂಗಳೂರು, ಉಡುಪಿ, ಸುಳ್ಯ) ಆಡುಭಾಷೆಯ ಶೈಲಿ ಬದಲಾಗುವುದರಿಂದ, ವಿಕಿಪೀಡಿಯಾಕ್ಕೆ ಮಾಹಿತಿ ದಾಖಲಿಸುವಾಗ ಸೂಕ್ತ ಉಲ್ಲೇಖಗಳು ಮತ್ತು ಆಕರ ಗ್ರಂಥಗಳನ್ನು ಬಳಸಿ ಅಧಿಕೃತತೆಯನ್ನು ಕಾಯ್ದುಕೊಳ್ಳಲಾಗುತ್ತಿದೆ.

30ಕ್ಕೂ ಹೆಚ್ಚು ಸಕ್ರಿಯ ಸದಸ್ಯರು ಲೇಖನ ರಚನೆಯಲ್ಲಿ ನಿರತರಾಗಿದ್ದಾರೆ. ಮನೆಯಲ್ಲೇ ಇರುವ ಗೃಹಿಣಿಯರನ್ನು ಪ್ರೋತ್ಸಾಹಿಸಲು ಲೇಖನ ಬರವಣಿಗೆ ಸ್ಪರ್ಧೆಗಳನ್ನು ಆಯೋಜಿಸಿ, ವಿಕಿಮೀಡಿಯಾ ಫೌಂಡೇಶನ್ ಸಹಯೋಗದೊಂದಿಗೆ ಬಹುಮಾನ ಹಾಗೂ ವೋಚರ್‌ಗಳನ್ನು ನೀಡಿ ಪ್ರೋತ್ಸಾಹಿಸಲಾಗುತ್ತಿದೆ. ಅಲ್ಲದೇ 'ಸಂಪೊಲಿಪುನ ಲೇಸ್' ಕಾರ್ಯಾಗಾರಗಳ ಮೂಲಕ ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ಯುವ ಬರಹಗಾರರಿಗೆ ತರಬೇತಿ ನೀಡಲಾಗುತ್ತಿದೆ.

ಕರಾವಳಿ ವಿಕಿಮೀಡಿಯನ್ ಯೂಸರ್ ಗ್ರೂಪ್ ಅಧ್ಯಕ್ಷ ಡಾ. ವಿಶ್ವನಾಥ ಬದಿಕಾನ ಮಾತನಾಡಿ, ತುಳು ವಿಕಿಪೀಡಿಯಾ ಲೈವ್ ಆಗಿ 10 ವರ್ಷಗಳು ಸಂದಿವೆ. ಶಾಲಾ ವಿದ್ಯಾರ್ಥಿಗಳಿಂದ ಹಿಡಿದು ಸಂಶೋಧಕರವರೆಗೆ ಎಲ್ಲರಿಗೂ ಸುಲಭವಾಗಿ, ಅಧಿಕೃತವಾಗಿ ಮಾಹಿತಿ ಸಿಗುವಂತೆ ಮಾಡುವುದೇ ನಮ್ಮ ಗುರಿ.